# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **110**

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 01.02.2021.

ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರ್ಗಿ ಜಿಲ್ಲೆಯಲ್ಲಿ ಕಳೆದ 02 ವರ್ಷದಿಂದ ಖಾಸಗಿ ಶಾಲೆ ನಡೆಸಲು ಅನುಮತಿ ಕೋರಿ ಸ್ವೀಕೃತವಾದ ಅರ್ಜಿಗಳೆಷ್ಟು; ಅವುಗಳಲ್ಲಿ ಎಷ್ಟು ಖಾಸಗಿ ಶಾಲೆ ನಡೆಸಲು ಅನುಮತಿ ನೀಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಕೆಳಗಿನ ಕೋಷ್ಟಕಗಳನ್ನು ನೋಡಿ |

**ಪ್ರಾಥಮಿಕ:**

| | 2019-20 | | 2020-21 | |
|---|---|---|---|---|
| | ಸ್ವೀಕೃತಿ | ಮಂಜೂರಾತಿ | ಸ್ವೀಕೃತಿ | ಮಂಜೂರಾತಿ |
| ಅಫಜಲಪೂರ | 16 | 16 | 9 | 0 |
| ಆಳಂದ | 8 | 4 | 4 | 0 |
| ಚಿಂಚೋಳಿ | 9 | 6 | 1 | 0 |
| ಚಿತ್ತಾಪೂರ | 18 | 10 | 6 | 3 |
| ಕಲಬುರ್ಗಿ ಉ | 28 | 21 | 20 | 3 |
| ಕಲಬುರ್ಗಿ ದ.ವ | 17 | 13 | 10 | 2 |
| ಜೇವರ್ಗಿ | 18 | 14 | 13 | 0 |
| ಸೇಡಂ | 5 | 2 | 4 | 0 |
| **ಒಟ್ಟು** | **119** | **86** | **67** | **8** |

**ಪ್ರೌಢ:**

| | 2019-20 | | 2020-21 | |
|---|---|---|---|---|
| | ಸ್ವೀಕೃತಿ | ಮಂಜೂರಾತಿ | ಸ್ವೀಕೃತಿ | ಮಂಜೂರಾತಿ |
| ಅಫಜಲಪೂರ | 3 | 3 | 5 | 1 |
| ಆಳಂದ | 2 | 0 | 3 | 1 |
| ಚಿಂಚೋಳಿ | 1 | 1 | 0 | 0 |
| ಚಿತ್ತಾಪೂರ | 3 | 3 | 3 | 1 |
| ಕಲಬುರ್ಗಿ ಉ | 21 | 1 | 8 | 0 |
| ಕಲಬುರ್ಗಿ ದ.ವ | 6 | 5 | 13 | 3 |
| ಜೇವರ್ಗಿ | 3 | 0 | 0 | 0 |
| ಸೇಡಂ | 3 | 0 | 1 | 0 |
| **ಒಟ್ಟು** | **42** | **13** | **33** | **6** |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಖಾಸಗಿ ಶಾಲೆ ನಡೆಸಲು ಅನುಮತಿ ನೀಡಲು ಅನುಸರಿಸುವ ಮಾನದಂಡಗಳೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 709 ಪಿಜಿಸಿ 2017, ದಿನಾಂಕ:08.03.2018ರಂತೆ ಖಾಸಗಿ ನಡೆಸಲು ಅನುಮತಿ ನೀಡಲಾಗುತ್ತಿದೆ (ಪ್ರತಿ ಲಗತ್ತಿಸಿದೆ). |
| ಇ) | ಹೆಚ್ಚುವರಿ ಶುಲ್ಕ ವಸೂಲಿ, ವಿದ್ಯಾರ್ಥಿ ವೇತನ ನೀಡದಿರುವ ಇನ್ನಿತರೆ | ಇಂತಹ ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. |

| | | |
|---|---|---|
| | ವಿಷಯಗಳಿಗೆ ಸಂಬಂಧಿಸಿದಂತೆ ಖಾಸಗಿ ಶಾಲೆಗಳ ವಿರುದ್ಧ ಸ್ವೀಕೃತವಾದ ದೂರುಗಳೆಷ್ಟು; ಅವುಗಳಿಗೆ ಕೈಗೊಂಡ ಪರಿಹಾರಗಳೇನು; (ತಾಲ್ಲೂಕುವಾರು, ಶಾಲಾವಾರು ಮಾಹಿತಿ ನೀಡುವುದು)? | |

ಸಂಖ್ಯೆ: ಇಡಿ 09 ಎಸ್‌ಟಿಬಿ 2021

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೫೪<br>Volume 154 | ಬೆಂಗಳೂರು, ಗುರುವಾರ, ಫೆಬ್ರವರಿ ೭, ೨೦೧೯ (ಮಾಘ ೧೮, ಶಕ ವರ್ಷ ೧೯೪೦)<br>Bengaluru, Thursday, February 7, 2019 (Magha 18, Shaka Varsha 1940) | ಸಂಚಿಕೆ ೬<br>Issue 6 |
|---|---|---|

## ಭಾಗ ೪ಎ

### ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

## HIGH COURT OF KARNATAKA

### NOTIFICATION

### NO. GOB(I) 22/2019, BENGALURU, DATED 14-01-2019

The below mentioned Judicial Officer is permitted to retire from Judicial Service on the date mentioned against her name, on attaining the age of Superannuation, i.e., 60 years subject to Government dues if any;

| SL.No. | Name and Designation | Date of Birth | Date of Retirement on attaining the age of superannuation |
|---|---|---|---|
| 1. | Smt. Lavanya Latha B.N.,<br>VIII Addl. District and Sessions Judge,<br>Bengaluru Rural District. | 23.03.1959 | 31.03.2019 |

PR – 21

BY ORDER OF THE HON'BLE CHIEF JUSTICE

V. SRISHANANDA

REGISTRAR GENERAL

## ನಗರಾಭಿವೃದ್ಧಿ ಸಚಿವಾಲಯ

### ತಿದ್ದುಪಡಿ

ಸಂಖ್ಯೆ: ನಅಇ 165 ಬೆಂರೂಪ್ರಾ 2012, ಬೆಂಗಳೂರು, ದಿನಾಂಕ: 08-06-2016.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 165 ಬೆಂರೂಪ್ರಾ 2012, ದಿನಾಂಕ: 20-03-2013 ರಲ್ಲಿನ ನಿಯಮ 4(C) ಯಲ್ಲಿನ ಕೊನೆಯ ವಾಕ್ಯದಲ್ಲಿ "ಖರೀದಿದಾರರಿಂದ" ಎಂಬ ಪದವನ್ನು "ಮಂಜೂರಾತಿದಾರರಿಂದ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

PR-20

SC-50

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ನಾಗರಾಜ

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ಶಿಕ್ಷಣ ಸಚಿವಾಲಯ

ಅಧಿಸೂಚನೆ – I

ಸಂಖ್ಯೆ : ಇಡಿ 709 ಪಿಜಿಸಿ 2017, ಬೆಂಗಳೂರು, ದಿನಾಂಕ:08-03-2018.

ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 145ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದಿ ಇತ್ಯಾದಿ) ನಿಯಮಗಳು, 1995ರ 5ಎ, 30, 31, 32 ಮತ್ತು 36ನೇ ಪ್ರಕರಣಗಳೊಂದಿಗೆ ಓದಲಾದ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದಿ ಇತ್ಯಾದಿ) (ತಿದ್ದುಪಡಿ) ನಿಯಮಗಳು, 2017ರ ಕರಡನ್ನು ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ದಿನಾಂಕ: 02-01-2018ರ ಭಾಗ-IV ಎ ಸಂಖ್ಯೆ 11ರಲ್ಲಿ ಅಧಿಸೂಚನೆ-I ಸಂಖ್ಯೆ: ಇಡಿ 709 ಪಿಜಿಸಿ 2017, ದಿನಾಂಕ:02-01-2018ರಲ್ಲಿ ಸರ್ಕಾರಿ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ.

ಮತ್ತು ದಿನಾಂಕ:03-02-2018ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ)ಭಾಗ-IVಎ, ಸಂಖ್ಯೆ 243 ರಲ್ಲಿನ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017, ದಿನಾಂಕ:03-02-2018ರಲ್ಲಿ ಮತ್ತೊಮ್ಮೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸಲ್ಲಿಸುವುದಕ್ಕೆ ಮತ್ತೆ ಹದಿನೈದು ದಿನಗಳ ಹೆಚ್ಚಿನ ಸಮಯಾವಕಾಶವನ್ನು ವಿಸ್ತರಿಸಲಾಗಿರುವುದರಿಂದ.

ಮತ್ತು ಸದರಿ ರಾಜ್ಯಪತ್ರವನ್ನು ದಿನಾಂಕ: 02-01-2018 ಮತ್ತು 03-02-2018ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು ಸಾರ್ವಜನಿಕರಿಂದ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ.

ಆದ್ದರಿಂದ, ಈಗ ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1) ರ 5ಎ, 30, 31, 32 ಮತ್ತು 36ನೇ ಪ್ರಕರಣಗಳೊಂದಿಗೆ ಓದಲಾದ 145ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.**-(1) ಈ ನಿಯಮಗಳನ್ನು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದಿ ಇತ್ಯಾದಿ) (ತಿದ್ದುಪಡಿ) ನಿಯಮಗಳು, 2018 ಎಂದು ಕರೆಯತಕ್ಕದ್ದು.

(2)ಅವು ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 2ನೇ ನಿಯಮದ ತಿದ್ದುಪಡಿ.**- ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದಿ ಇತ್ಯಾದಿ) ನಿಯಮಗಳು, 1995ರಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) 2ನೇ ನಿಯಮದಲ್ಲಿನ (ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(ಸಿ)"ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆ" ಎಂದರೆ ಮೂಲ ಸೌಕರ್ಯ, ಆರೋಗ್ಯ ಮತ್ತು ಸಾರಿಗೆ, ವೈಯುಕ್ತಿಕ ಮತ್ತು ಲೈಂಗಿಕ ಸುರಕ್ಷತೆ, ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ, ಸೈಬರ್ ಸುರಕ್ಷತೆ ಮತ್ತು ತುರ್ತು ಸನ್ನದ್ಧತೆ ಮತ್ತು ವಿಪತ್ತು ನಿರ್ವಹಣೆಯನ್ನು ಒಳಗೊಂಡಿರುವಂಥ ದೈಹಿಕ ಸುರಕ್ಷತೆ ;

(ಡಿ) "ಅನುಸೂಚಿ" ಎಂದರೆ ಈ ನಿಯಮಗಳಿಗೆ ಸೇರಿಸಲಾದ ಅನುಸೂಚಿ;

(ಇ) "ವಿದ್ಯಾರ್ಥಿ ಸಾಧನೆಯ ಅನುಸರಣಾ ವ್ಯವಸ್ಥೆ" ಎಂದರೆ, ವಿದ್ಯಾರ್ಥಿಗಳ ದಾಖಲಾತಿ ಮತ್ತು ಕಲಿಕಾ ಸಾಧನೆಗಳ ಮತ್ತು ಶಾಲಾ ಪ್ರಕ್ರಿಯೆಗಳ ನಿರ್ವಹಣೆಯ ಅನುಸರಣೆಗಾಗಿ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ".

**3. 3ನೇ ನಿಯಮದ ಪ್ರತ್ಯಾಯೋಜನೆ.**- ಸದರಿ ನಿಯಮಗಳ 3ನೇ ನಿಯಮಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

**"3. 2ನೇ ಪ್ರಕರಣದ (25) ಮತ್ತು (32) ನೇ ಖಂಡಗಳ ಉದ್ದೇಶಕ್ಕಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದ ತರಗತಿಗಳ ವಿವರ.**-

(ಎ)'ಪ್ರಾಥಮಿಕ ಶಿಕ್ಷಣ'ವು 1ರಿಂದ 8ನೇ ತರಗತಿಗಳನ್ನು ಹೊಂದಿರತಕ್ಕದ್ದು; ಇದರಲ್ಲಿ 1ರಿಂದ 5ನೇ ತರಗತಿಗಳವರೆಗೆ ಕಿರಿಯ ಪ್ರಾಥಮಿಕ ಮತ್ತು 6ರಿಂದ 8ನೇ ತರಗತಿಯವರೆಗೆ ಹಿರಿಯ ಪ್ರಾಥಮಿಕ ತರಗತಿಗಳನ್ನು ಹೊಂದಿರಬೇಕು;

(ಬಿ)'ಪ್ರೌಢಶಿಕ್ಷಣ'ವು 9 ಮತ್ತು 10ನೇ ತರಗತಿಗಳನ್ನು ಹೊಂದಿರತಕ್ಕದ್ದು;

(ಸಿ) ' ಹಿರಿಯ ಪ್ರೌಢ ಶಿಕ್ಷಣ'ವು 9 ರಿಂದ 12ನೇ ತರಗತಿಗಳನ್ನು ಹೊಂದಿರತಕ್ಕದ್ದು".

**4. 5ನೇ ನಿಯಮದ ತಿದ್ದುಪಡಿ.**- ಸದರಿ ನಿಯಮಗಳ 5ನೇ ನಿಯಮದಲ್ಲಿ,-

(i) (1)ನೇ ಉಪ ನಿಯಮದ, (ii)ನೇ ಖಂಡದಲ್ಲಿ, "ಆರು ಚದರ ಅಡಿ" ಎಂಬ ಪದಗಳಿಗೆ ಬದಲಾಗಿ "ಒಂದು ಚದರ ಮೀಟರ್" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ii) (3)ನೇ ಉಪ-ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

" (4) ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಮತ್ತು ಹಿರಿಯ ಪ್ರೌಢ ಶಿಕ್ಷಣ ಅಥವಾ ಅದರ ಯಾವುದೇ ಭಾಗದ ಶಿಕ್ಷಣವನ್ನು ನೀಡುವುದಕ್ಕಾಗಿ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಇಚ್ಛಿಸುವ ವ್ಯಕ್ತಿಗಳ ಪ್ರತಿಯೊಂದು ಖಾಸಗಿ ಮಂಡಳಿಯು ಶೈಕ್ಷಣಿಕ ಉದ್ದೇಶಗಳಿಗಾಗಿ ಉಪಯೋಗಿಸುವುದಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮತಿಯೊಂದಿಗೆ ಶೈಕ್ಷಣಿಕ ಸಂಸ್ಥೆಗಳ ಕಟ್ಟಡ ಮತ್ತು ಆಟದ ಮೈದಾನಕ್ಕಾಗಿ ಈ ಮುಂದಿನಂತೆ ಭೂಮಿಯ ವಿಸ್ತೀರ್ಣವನ್ನು ಕನಿಷ್ಠ ಸಮೀಪದಲ್ಲಿರುವಂತೆ ಕನಿಷ್ಠ 30 ವರ್ಷಗಳ ಅವಧಿಗಾಗಿ ಸ್ವಂತ ಅಥವಾ ಗುತ್ತಿಗೆಯದ್ದಾಗಿರತಕ್ಕದ್ದು.

| ಕ್ರ ಸಂ | ಸ್ಥಳ | ಭೂಮಿಯ ವಿಸ್ತೀರ್ಣ |
|---|---|---|
| I. | ಪೂರ್ವ ಪ್ರಾಥಮಿಕದಿಂದ ಹಿರಿಯ ಪ್ರೌಢ ಶಿಕ್ಷಣದವರೆಗೆ ಅಥವಾ ಪ್ರಾಥಮಿಕದಿಂದ ಹಿರಿಯ ಪ್ರೌಢ ಶಿಕ್ಷಣದವರೆಗೆ ಅಥವಾ ಪೂರ್ವ ಪ್ರಾಥಮಿಕದಿಂದ ಮಾಧ್ಯಮಿಕ ಶಿಕ್ಷಣ ನೀಡುತ್ತಿರುವ ಶೈಕ್ಷಣಿಕ ಸಂಸ್ಥೆ | |
| 1 | ಬಿ.ಬಿ.ಎಂ.ಪಿ. ಮತ್ತು ಇತರೆ ಮಹಾನಗರ ಪಾಲಿಕೆ ಪ್ರದೇಶಗಳು | 2000 ಚದರ ಮೀಟರ್ |
| 2 | ಇತರೆ ಪ್ರದೇಶಗಳು | 4000 ಚದರ ಮೀಟರ್ |
| II. | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ನೀಡುವ ಅಥವಾ ಪ್ರೌಢ ಮತ್ತು ಹಿರಿಯ ಪ್ರೌಢ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆ ಮಾತ್ರ | |
| 3 | ಬಿ.ಬಿ.ಎಂ.ಪಿ. ಮತ್ತು ಇತರೆ ಮಹಾನಗರ ಪಾಲಿಕೆ ಪ್ರದೇಶಗಳು | 1500 ಚದರ ಮೀಟರ್ |
| 4 | ಇತರೆ ಪ್ರದೇಶಗಳು | 3000 ಚದರ ಮೀಟರ್ |
| III. | ಪ್ರಾಥಮಿಕ ಶಿಕ್ಷಣ ಅಥವಾ ಪ್ರೌಢ ಶಿಕ್ಷಣ ಅಥವಾ ಪ್ರೌಢ ಮತ್ತು ಹಿರಿಯ ಪ್ರೌಢ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆ ಮಾತ್ರ | |
| 5 | ಬಿ.ಬಿ.ಎಂ.ಪಿ. ಮತ್ತು ಇತರೆ ಮಹಾನಗರ ಪಾಲಿಕೆ ಪ್ರದೇಶಗಳು | 1000 ಚದರ ಮೀಟರ್ |
| 6 | ಇತರೆ ಪ್ರದೇಶಗಳು | 2000 ಚದರ ಮೀಟರ್ |
| IV. | ಪೂರ್ವ ಪ್ರಾಥಮಿಕ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆ ಮಾತ್ರ | |
| 7 | ಎಲ್ಲಾ ಪ್ರದೇಶಗಳು | ನೆಲಮಹಡಿಯಲ್ಲಿ ಯೋಗ್ಯವಾದ ಕನಿಷ್ಠ 2000 ಚದರ ಅಡಿಗೆ ಒಳಪಟ್ಟು ಪ್ರತಿಯೊಂದು ವಿದ್ಯಾರ್ಥಿಗೆ ಒಂದು ಚದರ ಮೀಟರ್ ಕಾರ್ಪೆಟ್ ಪ್ರದೇಶ ಇರಬೇಕು. |

ಪರಂತು, ಮೇಲಿನ ಭೂಮಿಯ ಅಗತ್ಯತೆಯು ಪೂರ್ವ ಪ್ರಾಥಮಿಕ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆಗಳಿಗೆ ಮಾತ್ರ ಅನ್ವಯವಾಗತಕ್ಕದ್ದಲ್ಲ.

ಮತ್ತು ಪರಂತು, ಮೇಲಿನ ಭೂಮಿಯ ವಿಸ್ತೀರ್ಣದ ಅಗತ್ಯತೆಯು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ, 2009 (2009ರ ಅಧಿನಿಯಮ ಸಂಖ್ಯೆ 35)ರಲ್ಲಿ ನಿರ್ದಿಷ್ಟಪಡಿಸಲಾದ ಭೂಮಿಯ ವಿಸ್ತೀರ್ಣವನ್ನು ಹೊರತುಪಡಿಸಿ,2017–18ನೇ ಶೈಕ್ಷಣಿಕ ವರ್ಷದವರೆಗೆ ಯುಕ್ತನೋಂದಣಿಯೊಂದಿಗೆ ಪ್ರಾರಂಭಿಸಲಾದ ಅಸ್ತಿತ್ವದಲ್ಲಿರುವ ಶೈಕ್ಷಣಿಕ ಸಂಸ್ಥೆಗಳಿಗೆ ಅನ್ವಯವಾಗತಕ್ಕದ್ದಲ್ಲ".

**5. 5ಎ ಹೊಸ ನಿಯಮದ ಸೇರ್ಪಡೆ.**–ಸದರಿ ನಿಯಮಗಳ, 5ನೇ ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"5ಎ. ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆಗಾಗಿ ಕ್ರಮಗಳು.**–(1) ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಮತ್ತು ಹಿರಿಯ ಪ್ರೌಢ ಶಿಕ್ಷಣ ಅಥವಾ ಅದರ ಯಾವುದೇ ಭಾಗದ ಶಿಕ್ಷಣವನ್ನು ನೀಡುವುದಕ್ಕಾಗಿ ಶೈಕ್ಷಣಿಕ ಸಂಸ್ಥೆಯನ್ನು ನಡೆಸುತ್ತಿರುವ ಅಥವಾ ನಿರ್ವಹಿಸುತ್ತಿರುವ ಅಥವಾ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಇಚ್ಛಿಸುವ ಪ್ರತಿಯೊಂದು ಆಡಳಿತ ಮಂಡಳಿಯು(ಗವರ್ನಿಂಗ್ ಕೌನ್ಸಿಲ್) ಮತ್ತು ಶೈಕ್ಷಣಿಕ ಸಂಸ್ಥೆಯು ಸ್ವತಃ,–

(ಎ) ವಿದ್ಯಾರ್ಥಿಗಳ ರಕ್ಷಣಾ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು;

(ಬಿ) ವಾರ್ಷಿಕವಾಗಿ ಅಪಾಯ ಉಂಟಾಗುವಂಥ ಅಂಶಗಳ ಬಗ್ಗೆ ಸುರಕ್ಷತಾ ಅವಶ್ಯಕತೆಗಳ ನಿರ್ಧರಣೆಯನ್ನು ಕೈಗೊಳ್ಳತಕ್ಕದ್ದು;

(ಸಿ) ವಿಪತ್ತು ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು;

(ಡಿ) ಮೊದಲನೇ ಅನುಸೂಚಿಯಲ್ಲಿ ವಿವರಿಸಲಾದ ರೀತಿಯಲ್ಲಿ ಲೈಂಗಿಕ ಅಪರಾಧಗಳಿಂದ ಸಂರಕ್ಷಣೆ ನೀಡುವುದೂ ಸೇರಿದಂತೆ ವಿದ್ಯಾರ್ಥಿಗಳ ಸಂರಕ್ಷಣೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳತಕ್ಕದು; ಮತ್ತು

(ಇ) ಎರಡನೇ ಅನುಸೂಚಿಯಲ್ಲಿ ವಿವರಿಸಲಾದ ರೀತಿಯಲ್ಲಿ ವಿದ್ಯಾರ್ಥಿಗಳಿಗಾಗಿ ಸುರಕ್ಷಿತ ಕಲಿಕಾ ಪರಿಸರ, ಸುರಕ್ಷತೆಗಾಗಿ ಯೋಜನೆ ರೂಪಿಸುವುದು, ಸುರಕ್ಷತಾ ಕ್ರಮಗಳನ್ನು ಕಾರ್ಯಗತಗೊಳಿಸುವುದು, ಶಾಲಾ ಸುರಕ್ಷತೆಗಾಗಿ ಸಾಮರ್ಥ್ಯವನ್ನು ಬಲಪಡಿಸುವುದಕ್ಕೆ ಮತ್ತು ಶಾಲಾ ಸುರಕ್ಷತೆಯ ಮೇಲ್ವಿಚಾರಣೆಗಾಗಿ ಸಾಂಸ್ಥಿಕ ಹೊಣೆಗಾರಿಕೆಯನ್ನು ಬಲಪಡಿಸುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) (1)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕ್ರಮಗಳು, ರಾಜ್ಯಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳಿಂದ ಸ್ಥಾಪಿಸಲಾದ ಅಥವಾ ನಿರ್ವಹಿಸಲಾದ ಶೈಕ್ಷಣಿಕ ಸಂಸ್ಥೆಗಳಿಗೂ ಸಹ ಅನ್ವಯಿಸತಕ್ಕದ್ದು.

(3) ಈ ಕ್ರಮಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿರ್ವಹಣಾ ಮಾರ್ಗದರ್ಶಕ ಸೂತ್ರಗಳನ್ನು ಪೋಷಕರು ಮತ್ತು ಸಾರ್ವಜನಿಕರಿಗೆ ತಿಳಿಯಪಡಿಸುವುದು ಮತ್ತು ವರದಿಯನ್ನು ಅಧಿಸೂಚನೆಯ ಮೂಲಕ ಸರ್ಕಾರದಿಂದ ನಿರ್ದಿಷ್ಟಪಡಿಸತಕ್ಕದ್ದು.

(4) ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಮತ್ತು ಹಿರಿಯ ಪ್ರೌಢ ಶಿಕ್ಷಣ ಅಥವಾ ಅದರ ಯಾವುದೇ ಭಾಗದ ಶಿಕ್ಷಣವನ್ನು ನೀಡುವುದಕ್ಕಾಗಿ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲ್ಪಡುವಂತಹ ಶೈಕ್ಷಣಿಕ ಸಂಸ್ಥೆಗಳೂ ಸೇರಿದಂತೆ ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯನ್ನು, ರಾಜ್ಯ ಸರ್ಕಾರದ ವಿದ್ಯಾರ್ಥಿ ಸಾಧನೆಯ ಅನುಸರಣಾ ವ್ಯವಸ್ಥೆಯ ಬಗ್ಗೆ(sts.karnataka.Gov.in) ರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ದಾಖಲೆಯ ವಿವರಣೆಗಳನ್ನು ಒದಗಿಸುವುದಕ್ಕೆ ಅಗತ್ಯಪಡಿಸತಕ್ಕದ್ದು.

ಪರಂತು, ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ದ ಮೇರೆಗೆ ಅಥವಾ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಸೌಲಭ್ಯಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ ಸಂಖ್ಯೆ 18) ರ ಮೇರೆಗೆ ಗೊತ್ತುಪಡಿಸಬಹುದಾದಂತೆ ವಿದ್ಯಾರ್ಥಿಗಳ ವಿವರಗಳನ್ನು ಸಾರ್ವಜನಿಕ ಡೊಮೈನ್‌ಗಳಲ್ಲಿ ಇಡತಕ್ಕದ್ದಲ್ಲ. ಆದರೆ ವಿದ್ಯಾರ್ಥಿ ಸಾಧನೆಯ ಅನುಸರಣಾ ವ್ಯವಸ್ಥೆಯ ಉದ್ದೇಶವನ್ನು ಸುಗಮಗೊಳಿಸುವುದಕ್ಕೆ ಅಗತ್ಯವಾದ ಸರ್ಕಾರ ಅಥವಾ ಸರ್ಕಾರಿ ಏಜೆನ್ಸಿಗಳೊಂದಿಗೆ ಹಂಚಿಕೊಳ್ಳತಕ್ಕದ್ದು.

6. 7ನೇ ನಿಯಮದ ಪ್ರತ್ಯಾಯೋಜನೆ.- ಸದರಿ ನಿಯಮಗಳ 7ನೇ ನಿಯಮದ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"7. ಹಾಲಿ ಇರುವ ಸಂಸ್ಥೆಗಳಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಮತ್ತು ಸುರಕ್ಷತೆ ಮತ್ತು ಭದ್ರತಾ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಅವಧಿ.-(1) 2017-18ನೇ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಆದರೆ 5ಎ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆ ಮತ್ತು ಶಾಲಾ ಸುರಕ್ಷತೆಗಾಗಿ ಕಟ್ಟಡ ಅಥವಾ ಇತರೆ ಮೂಲಸೌಕರ್ಯಗಳ ಮಾನದಂಡಗಳನ್ನು ಪಾಲಿಸದಿದ್ದಲ್ಲಿ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮದ ನಿಗದಿ ಇತ್ಯಾದಿ) (ತಿದ್ದುಪಡಿ) ನಿಯಮಗಳು, 2018 ಅಥವಾ ಸಂಬಂಧಪಟ್ಟ ಅಧಿಸೂಚನೆಗಳನ್ನು ಹೊರಡಿಸಿದ, ಅದರಲ್ಲಿ ಯಾವುದು ಅನಂತರವೋ ಅದು ಪ್ರಾರಂಭದ ದಿನಾಂಕದಿಂದ ಒಂದು ವರ್ಷ ಮೀರದ ಅವಧಿಯೊಳಗೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) 2017-18ನೇ ಶೈಕ್ಷಣಿಕ ವರ್ಷದ ಅವಧಿಯಲ್ಲಿ ನಡೆಯುತ್ತಿರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮದ ನಿಗದಿ ಇತ್ಯಾದಿ) (ತಿದ್ದುಪಡಿ) ನಿಯಮಗಳು, 2018 ಅಥವಾ ಸಂಬಂಧಿತ ಅಧಿಸೂಚನೆಗಳನ್ನು ಹೊರಡಿಸಿದ, ಅದರಲ್ಲಿ ಯಾವುದು ಅನಂತರವೋ ಅದು ಪ್ರಾರಂಭದ ದಿನಾಂಕದಿಂದ ಆರು ತಿಂಗಳು ಮೀರದಂಥ ಅವಧಿಯೊಳಗೆ 5ಎ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ವಿದ್ಯಾರ್ಥಿಗಳ ಸುರಕ್ಷತೆ, ಭದ್ರತೆ ಮತ್ತು ಶಾಲಾ ಭದ್ರತೆಗಾಗಿ, (1)ನೇ ಉಪ-ನಿಯಮದ ಮೇರೆಗೆ ಒಳಗೊಂಡಿರುವಂತಹವುಗಳನ್ನು ಹೊರತುಪಡಿಸಿ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ಹೊಸ ಶೈಕ್ಷಣಿಕ ಸಂಸ್ಥೆಯನ್ನು 4, 5, 5ಎ ಮತ್ತು 6ನೇ ನಿಯಮಗಳ ಎಲ್ಲ ಉಪಬಂಧಗಳೊಂದಿಗೆ ಇದನ್ನು ಗಮನಾರ್ಹವಾಗಿ ಅನುಸರಿಸದ ಹೊರತು ಅದರ ತರಗತಿಗಳನ್ನು ಪ್ರಾರಂಭಿಸತಕ್ಕದ್ದಲ್ಲ."

**7. ಅನುಸೂಚಿಗಳ ಸೇರ್ಪಡೆ .-** ಸದರಿ ನಿಯಮಗಳ 21ನೇ ನಿಯಮದ ತರುವಾಯ, ಈ ಮುಂದಿನ ಅನುಸೂಚಿಗಳನ್ನು ಸೇರಿಸತಕ್ಕದ್ದು, ಎಂದರೆ:-

**"ಮೊದಲನೇ ಅನುಸೂಚಿ**

**(5ಎ (1) (ಡಿ) ನಿಯಮವನ್ನು ನೋಡಿ)**

**ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆಗಾಗಿ ಕ್ರಮಗಳು**

ಮಗುವಿನ ಸುರಕ್ಷತೆಯ ವಿವಿಧ ಆಯಾಮಗಳನ್ನು ಪರಿಗಣನೆಗೆ ತೆಗೆದುಕೊಂಡು ಮತ್ತು ಸುರಕ್ಷತೆ ಮತ್ತು ಸಂರಕ್ಷಣೆಯ ಐದು ಪ್ರಮುಖ ಪ್ರದೇಶಗಳ ಮೇರೆಗೆ ಮೌಲ್ಯಮಾಪನಕ್ಕಾಗಿ ಸೂಚಕಗಳನ್ನು ಒದಗಿಸುವುದು; ಮೂಲಸೌಕರ್ಯ, ಆರೋಗ್ಯ ಮತ್ತು ಸಾರಿಗೆ, ವೈಯಕ್ತಿಕ ಮತ್ತು ಲೈಂಗಿಕ ಸುರಕ್ಷತೆ, ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ, ಸೈಬರ್ ಸುರಕ್ಷತೆ ಮತ್ತು ತುರ್ತು ಸನ್ನದ್ಧತೆ ಮತ್ತು ವಿಪತ್ತು ನಿರ್ವಹಣೆಯನ್ನು ಒಳಗೊಂಡಿರುವಂಥ ದೈಹಿಕ ಸುರಕ್ಷತೆಗೆ ಪರಿಶೀಲನಾ ಪಟ್ಟಿಯ ನಮೂನೆಯಲ್ಲಿ ಕ್ರಮಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ :

ಈ ಪರಿಶೀಲನಾ ಪಟ್ಟಿಯನ್ನು ಶೈಕ್ಷಣಿಕ ಸಂಸ್ಥೆಯ ಸೂಕ್ತ ಅವಶ್ಯಕತೆಗಳಿಗೆ ಅನುಗುಣವಾಗಿ ಸಿಬ್ಬಂದಿ, ಪೋಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಮಾಲೋಚಿಸಿ ಶೈಕ್ಷಣಿಕ ಸಂಸ್ಥೆಗಳ ಅಧಿಕಾರಿಗಳಿಂದ ತಯಾರಿಸಬಹುದು. ಆದಾಗ್ಯೂ ಕಡ್ಡಾಯವಾಗಿ (ಎಮ್) ಎಂದು ಗುರುತಿಸಲ್ಪಟ್ಟಿರುವ ಸೂಚಕಗಳನ್ನು ಶೈಕ್ಷಣಿಕ ಸಂಸ್ಥೆಗಳು ಪಾಲಿಸತಕ್ಕದ್ದು.

**ಭಾಗ 1 : ದೈಹಿಕ ಸುರಕ್ಷತೆ – ಮೂಲಸೌಕರ್ಯ, ಆರೋಗ್ಯ ಮತ್ತು ಸಾರಿಗೆ**

**ಭಾಗ 1 ಎ: ಮೂಲಸೌಕರ್ಯ**

| ಕ್ರ ಸಂ | ಕ್ರಮಗಳು / ಸೂಚಕಗಳು | ಪ್ರತಿಯೊಂದು ಸೂಚಕಕ್ಕೆ 'ಹೌದು' ಅಥವಾ 'ಇಲ್ಲ' ಎಂದು ಗುರುತಿಸುವುದು | ಕಡ್ಡಾಯವಾಗಿ (ಎಮ್)/ಶಿಫಾರಸ್ಸು ಮಾಡಿದ(ಆರ್)/ ಅನ್ವಯಿಸುವುದಿಲ್ಲ (ಎನ್‌ಎ) |
|---|---|---|---|
| 1 | ಶೈಕ್ಷಣಿಕ ಸಂಸ್ಥೆಯು ಸರಿಯಾದ ಕಾಂಪೌಂಡ್ ಗೋಡೆಯನ್ನು ಹೊಂದಿರುವುದು ಅಥವಾ ಅಲ್ಲಿ ಕಾಂಪೌಂಡ್ ಗೋಡೆ ಇಲ್ಲದಿದ್ದಲ್ಲಿ, ಶೈಕ್ಷಣಿಕ ಸಂಸ್ಥೆಯು ತಾತ್ಕಾಲಿಕ ಬೇಲಿಯನ್ನು ಹೊಂದಿರುವುದು. | | ಎಮ್ |
| 2 | ಎಲ್ಲಾ ಶೈಕ್ಷಣಿಕ ಸಂಸ್ಥೆಯ ಆವರಣಗಳು ಮತ್ತು ತರಗತಿಗಳು, ಅನ್ವಯಿಸುವ ಕಾನೂನಿನ ಪ್ರಕಾರ ನಿಗದಿಪಡಿಸಿದಂಥ ಸ್ಥಳದೊಂದಿಗೆ ಸೂಕ್ತವಾದ ಬಾಗಿಲುಗಳು ಮತ್ತು ಕಿಟಕಿಗಳೊಂದಿಗೆ ಸೂರ್ಯನ ಬೆಳಕು ಮತ್ತು ಗಾಳಿ ಸಂಚಾರವಿರಬೇಕು. | | ಎಮ್ |
| 3 | (i) ಮಹಡಿಗಳು ಯಾವುದೇ ಗುಂಡಿಗಳು ಅಥವಾ ಮುರಿದ ಮೇಲ್ಮೈಯಿಂದ ಕೂಡಿರಬಾರದು.<br>(ii)ಛಾವಣಿಗಳು ಯಾವುದೇ ಸೋರಿಕೆ, ಒಡೆತಗಳಿಲ್ಲದೆ ಗಟ್ಟಿಯಾಗಿರಬೇಕು.<br>(iii) ಮೆಟ್ಟಿಲುಗಳು ಸರಿಯಾದ ಆಧಾರವನ್ನು ಹೊಂದಿರುವುದು ಮತ್ತು ಉತ್ತಮ ಸ್ಥಿತಿಯಲ್ಲಿರಬೇಕು.<br>(iv) ನೆಲ, ಛಾವಣಿ ಮತ್ತು ಮೆಟ್ಟಿಲುಗಳು ಮಕ್ಕಳಿಗೆ ಹಾನಿ ಮಾಡುವಂಥ ಯಾವುದೇ ಮುರಿದ ಭಾಗಗಳನ್ನು / ತೇಪೆಗಳನ್ನು ಅಥವಾ ಹೊರಕ್ಕೆ ಚಾಚಿಕೊಂಡಿರುವ / ಅಂಚುಗಳನ್ನು ಹೊಂದಿರಬಾರದು.<br>(v) ಶಾಲೆಯ ಇಡೀ ಆವರಣದಲ್ಲಿ, ಮಕ್ಕಳಿಗೆ ಕ್ಷತಿಯುಂಟುಮಾಡುವಂತಹ ಚೂಪಾದ ವಸ್ತುಗಳು ಹೊರಗೆ ಮುಂಚಾಚಿಕೊಂಡಿರಬಾರದು. | | ಎಮ್ |

| ಕ್ರ. ಸಂ | ಕ್ರಮಗಳು / ಸೂಚಕಗಳು | ಪ್ರತಿಯೊಂದು ಸೂಚಕಕ್ಕೆ 'ಹೌದು' ಅಥವಾ 'ಇಲ್ಲ' ಎಂದು ಗುರುತಿಸುವುದು | ಕಡ್ಡಾಯವಾಗಿ (ಎಮ್)/ಶಿಫಾರಸ್ಸು ಮಾಡಿದ(ಆರ್)/ ಅನ್ವಯಿಸುವುದಿಲ್ಲ (ಎನ್‌ಎ) |
|---|---|---|---|
| 4 | (i) ಕಿಟಕಿಗಳು ಸುರಕ್ಷಿತ ಗ್ರಿಲ್‌ಗಳನ್ನು ಹೊಂದಿರಬೇಕು.<br>(ii) ಎತ್ತರದ ಗೋಡೆಗಳು ಮತ್ತು ಬಾಲ್ಕನಿಗಳು ಸೂಕ್ತವಾದ ಎತ್ತರವಾದ ಬೇಲಿಗಳನ್ನು ಹೊಂದಿರಬೇಕು.<br>(iii) ಹೊರಗಡೆ, ಮುಖ್ಯ ದ್ವಾರ ಮತ್ತು ಗೇಟ್‌ನ್ನು ಸರಿಯಾದ ರೀತಿಯಲ್ಲಿ ಸುಸ್ಥಿತಿಯಲ್ಲಿಡತಕ್ಕದ್ದು. | | ಎಮ್ |
| 5 | (i) ಎಲ್ಲಾ ವಿದ್ಯುಚ್ಛಕ್ತಿ ವೈರಿಂಗ್‌ಗಳನ್ನು ಮರೆಮಾಚುವಂತೆ ಅಥವಾ ವಿದ್ಯುತ್ ಶಾಖ ತಾಕದಂತೆ ಅಳವಡಿಸುವುದು.<br>(ii) ಸ್ವಿಚ್ ಬಾಕ್ಸ್‌ಗಳನ್ನು ಯುಕ್ತವಾಗಿ ಸುಸ್ಥಿತಿಯಲ್ಲಿಟ್ಟಿರಬೇಕು ಮತ್ತು ಮಕ್ಕಳ ಕೈಗೆ ಸಿಗದ ಹಾಗೆ ಇಡಬೇಕು.<br>(iii) ವಿದ್ಯುತ್ ಉಪಕರಣಗಳನ್ನು ನಿಯಮಿತವಾಗಿ ಪರಿಶೀಲಿಸುತ್ತಿರಬೇಕು ಮತ್ತು ಸುಸ್ಥಿತಿಯಲ್ಲಿಟ್ಟಿರಬೇಕು.<br>(iv) ಮಕ್ಕಳಿರುವ ಸ್ಥಳದಲ್ಲಿ ಇಡಲಾದ ಫ್ಯಾನುಗಳು ಅವರಿಗೆ ಅಪಾಯವನ್ನುಂಟು ಮಾಡಬಾರದು. | | ಎಮ್ |
| 6 | ಬೆಂಚುಗಳು ಡೆಸ್ಕ್‌ಗಳು ಗಟ್ಟಿಮುಟ್ಟಾಗಿರಬೇಕು ಮತ್ತು ಅವುಗಳನ್ನುಮರ, ಪ್ಲಾಸ್ಟಿಕ್ ಅಚ್ಚು, ಲೋಹ ಅಥವಾ ಯಾವುದೇ ಇತರ ವಸ್ತುಗಳಿಂದ ಮಾಡಿರಲಿ. ಅವುಗಳು ದುಂಡಾದ ಅಂಚನ್ನು ಹೊಂದಿರಬೇಕು ಮತ್ತು ಅವು ಮುರಿಯದಂತಿರಬೇಕು. | | ಎಮ್ |
| 7 | (i) ಶಾಲೆಗಳಲ್ಲಿರುವ ಚರಂಡಿಗಳು, ಸಂಪುಗಳು, ಕೊಳವೆಬಾವಿಗಳನ್ನು ಮತ್ತು ಎತ್ತರದ ಟ್ಯಾಂಕ್‌ಗಳನ್ನು ಮುಚ್ಚಿರಬೇಕು.<br>(ii) ಎತ್ತರದ ಟ್ಯಾಂಕ್‌ಗಳು, ಸಂಪುಗಳನ್ನು ನಿಯತಕಾಲಿಕವಾಗಿ ಸ್ವಚ್ಛವಾಗಿಡಬೇಕು.<br>(iii) ಶಾಲೆಗಳ ಸಮೀಪದ ಚರಂಡಿಗಳನ್ನುಮುಚ್ಚಿರಬೇಕು. | | ಎಮ್<br>ಎಮ್<br>ಆರ್ |
| 8 | (i) ಮಧ್ಯಾಹ್ನದ ಬಿಸಿ ಊಟದ ಕಾರ್ಯಕ್ರಮಕ್ಕಾಗಿ ದಾಸ್ತಾನು ಸೌಲಭ್ಯವಿರುವ ಪ್ರತ್ಯೇಕ ಅಡುಗೆ ಮನೆ ಇರಬೇಕು.<br>(ii) ಅಡುಗೆಮನೆಯನ್ನು ಸ್ವಚ್ಛವಾಗಿ ಮತ್ತು ಆರೋಗ್ಯಕರವಾಗಿ ಸುಸ್ಥಿತಿಯಲ್ಲಿಟ್ಟುಕೊಂಡಿರಬೇಕು.<br>(iii) ಅಡುಗೆ ಮನೆ ಇಲಿ ಮತ್ತು ಕ್ರಿಮಿಕೀಟಗಳಿಂದ ಮುಕ್ತವಾಗಿರಬೇಕು.<br>(iv) ಎಲ್ಲಾ ಆಹಾರ ಉತ್ಪನ್ನಗಳನ್ನು ಸ್ವಚ್ಛ ಪಾತ್ರೆಗಳಲ್ಲಿ ಮುಚ್ಚಿಡಬೇಕು ಮತ್ತು ಆರೋಗ್ಯಕರವಾಗಿ ಸಂಗ್ರಹಿಸಿಟ್ಟಿರಬೇಕು. | | ಎಮ್<br>ಎಮ್<br>ಎಮ್<br>ಎಮ್ |
| 9 | (i) ಕುಡಿಯುವ ನೀರು ಲಭ್ಯವಿರಬೇಕು.<br>(ii) ನೀರಿನ ಶುದ್ಧೀಕರಣ / ಶುದ್ಧೀಕರಿಸಿರುವ ನೀರು ಲಭ್ಯವಿರಬೇಕು.<br>(iii) ಸಾಕಷ್ಟು ಸಂಖ್ಯೆಯ ನಲ್ಲಿಗಳ ಮೂಲಕ ನೀರು ಸರಬರಾಜಾಗಬೇಕು.<br>(iv) ನೀರು ಸರಬರಾಜು ಮಾಡುವ ಪ್ರದೇಶದಲ್ಲಿ ನೀರು ನಿಂತಿರಬಾರದು. | | ಎಮ್<br>ಆರ್<br>ಆರ್<br>ಎಮ್ |
| 10 | (i) ಶಾಲೆಯಲ್ಲಿ ಹುಡುಗರಿಗಾಗಿ ಪ್ರತ್ಯೇಕ ಕಾರ್ಯನಿರತ ಶೌಚಾಲಯವಿರಬೇಕು.<br>(ii) ಶಾಲೆಯಲ್ಲಿ ಹುಡುಗಿಯರಿಗಾಗಿ ಪ್ರತ್ಯೇಕ ಕಾರ್ಯನಿರತ ಶೌಚಾಲಯವಿರಬೇಕು.<br>(iii) ಶೌಚಾಲಯಗಳ ಸಂಖ್ಯೆಯು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿರಬೇಕು.<br>(iv) ಶೌಚಾಲಯಗಳನ್ನು ನೈರ್ಮಲ್ಯಕರವಾಗಿ ಸುಸ್ಥಿತಿಯಲ್ಲಿಟ್ಟಿರಬೇಕು.<br>(v) ಎಲ್ಲಾ ಸೋಂಕು ನಿವಾರಕಗಳು ಮತ್ತು ಸ್ವಚ್ಛಗೊಳಿಸುವ ವಸ್ತುಗಳನ್ನು ಮಕ್ಕಳ ಕೈಗೆ ಸಿಗದಂತೆ ಇಟ್ಟುಕೊಳ್ಳಬೇಕು. | | ಎಮ್<br>ಎಮ್<br>ಎಮ್<br>ಎಮ್<br>ಎಮ್ |
| 11 | (i) ಕ್ರೀಡಾ ಕೊಠಡಿ, ಪ್ರತ್ಯೇಕವಾದ ಕೊಠಡಿ ಲಭ್ಯವಿದ್ದಲ್ಲಿ ಅದು ಉತ್ತಮ ಗಾಳಿ ಮತ್ತು ಉತ್ತಮ ಆಟದ ಸಾಮಾನುಗಳನ್ನು ಹೊಂದಿರಬೇಕು. | | ಆರ್ |

| ಕ್ರ ಸಂ | ಕ್ರಮಗಳು / ಸೂಚಕಗಳು | ಪ್ರತಿಯೊಂದು ಸೂಚಕಕ್ಕೆ 'ಹೌದು' ಅಥವಾ 'ಇಲ್ಲ' ಎಂದು ಗುರುತಿಸುವುದು | ಕಡ್ಡಾಯವಾಗಿ (ಎಮ್)/ಶಿಫಾರಸ್ಸು ಮಾಡಿದ(ಆರ್)/ ಅನ್ವಯಿಸುವುದಿಲ್ಲ (ಎನ್‌ಎ) |
|---|---|---|---|
| | (ii) ಸಭಾಂಗಣ ಮತ್ತು ವ್ಯಾಯಾಮ ಶಾಲೆಗಳು (ಯಾವುದಾದರೂ ಇದ್ದಲ್ಲಿ) ತರಬೇತಿ ಪಡೆದ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಮಕ್ಕಳು ಅವುಗಳನ್ನು ಬಳಸಿಕೊಳ್ಳುವುದು.<br>(iii) ಶಾಲೆಯ ಆಟದ ಮೈದಾನಗಳು, ತೂಗುಯ್ಯಾಲೆಗಳು, ಸವಾರಿಗಳು, ಆಟದ ಸಾಧನ ಸಾಮಗ್ರಿಗಳು ಇತ್ಯಾದಿಗಳನ್ನು ಸುರಕ್ಷಿತವಾಗಿ ಮತ್ತು ನಿಯಮಿತವಾಗಿ ಸುಸ್ಥಿತಿಯಲ್ಲಿಟ್ಟಿರಬೇಕು.<br>(iv) ಆಟದ ಸಲಕರಣೆಗಳನ್ನು ಬಳಸುವುದಕ್ಕೆ ಸಂಬಂಧಿಸಿದ ಎಲ್ಲಾ ಸುರಕ್ಷತಾ ಸೂಚನೆಗಳನ್ನು ಅವುಗಳ ಬಳಿ ಎದ್ದುಕಾಣುವ ಹಾಗೆ ಪ್ರದರ್ಶಿಸಬೇಕು. | | ಎಮ್ |
| 12 | ಕಂಪ್ಯೂಟರ್ ಲ್ಯಾಬ್ ಮತ್ತು ಪ್ರಯೋಗಾಲಯವನ್ನು ತರಬೇತಿ ಪಡೆದ ಶಿಕ್ಷಕರುಗಳ ಮೇಲ್ವಿಚಾರಣೆಯ ಮೇರೆಗೆ ಮಾತ್ರ ಬಳಸುವುದು. | | ಎಮ್ |
| 13 | ಎಲ್ಲಾ ಅಪಾಯಕಾರಿ ವಸ್ತುಗಳನ್ನು ಮಕ್ಕಳ ಕೈಗೆ ಸಿಗದ ಹಾಗೆ ಸಂಗ್ರಹಿಸಿಡಬೇಕು ಮತ್ತು ಬೀಗ ಹಾಕಬೇಕು.<br>(i) ಶಾಲೆಯ ತ್ಯಾಜ್ಯ ಮತ್ತು ಕಸದ ವಿಲೇವಾರಿಗಾಗಿ ಸೂಕ್ತ ವ್ಯವಸ್ಥೆ ಮಾಡಬೇಕು.<br>(ii) ಶಾಲೆಯು ಸೂಕ್ತವಾದ ಒಳಚರಂಡಿ ಮತ್ತು ಚರಂಡಿಯ ವ್ಯವಸ್ಥೆಯನ್ನು ಹೊಂದಿರಬೇಕು. | | ಎಮ್<br>ಆರ್ |
| 14 | (i) ಎಲಿವೇಟರ್‌ಗಳು (ಏನಾದರೂ ಇದ್ದಲ್ಲಿ)(ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಿಂದ ನೀಡಿದ)ಲೈಸೆನ್ಸ್ ಹೊಂದಿರಬೇಕು ಮತ್ತು ಕಾನೂನು ಮೇರೆಗೆ ನಿರ್ದಿಷ್ಟಪಡಿಸಿದಂತೆ ನಿರ್ವಹಣೆ ಮತ್ತು ಜೋಡಣಾ ಅಗತ್ಯತೆಗಳನ್ನು ಪಾಲಿಸಿರಬೇಕು.<br>(ii) ಲಿಫ್ಟ್‌ಗಳು, ಎಸ್ಕಲೇಟರ್‌ಗಳು ಮತ್ತು ಪ್ರಯಾಣಿಕರ ಕನ್ವೇಯರ್‌ಗಳ ಬಗ್ಗೆ ಲಿಫ್ಟ್‌ನ ಪರಿಶೀಲನಾಧಿಕಾರಿಗಳಿಗೆ ವಾರ್ಷಿಕ ತಪಾಸಣೆ ಮತ್ತು ನಿರ್ವಹಣಾ ವರದಿಯನ್ನು ಸಲ್ಲಿಸಬೇಕು. | | ಎಮ್ |
| 15 | ಟ್ರಾನ್ಸ್‌ಫಾರ್ಮರ್,ಜನರೇಟರ್, (ಏನಾದರೂ ಇದ್ದಲ್ಲಿ) ಲೈಸನ್ಸ್ ಪಡೆದಿರಬೇಕು (ಎಸ್ಕಾಂನಿಂದ) ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಒಪ್ಪಿಗೆಯನ್ನು ಲಿಖಿತದಲ್ಲಿ ಪಡೆದು ಅವುಗಳನ್ನು ಸುರಕ್ಷಿತ ಪ್ರದೇಶಗಳಲ್ಲಿ ಇಟ್ಟುಕೊಂಡು ಸುಸ್ಥಿತಿಯಲ್ಲಿಡಬೇಕು ಮತ್ತು ಬೀಗ ಹಾಕಬೇಕು. | | ಎಮ್ |
| 16 | (i) ಇಲಾಖೆಯ ಮಾರ್ಗದರ್ಶನ ಮತ್ತು ಎಂ.ಹೆಚ್.ಆರ್.ಡಿ ಮಾನದಂಡಗಳಲ್ಲಿ ನೀಡಿರುವಂತೆ ವಿಶೇಷವಾದ ಅವಶ್ಯಕತೆಗಳೊಂದಿಗೆ ಸೂಕ್ತ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳೊಂದಿಗೆ ಅಸಮರ್ಥತೆ ಇರುವವರಿಗೆ ಸ್ನೇಹಪರವಾದ ಶಾಲಾ ಪರಿಸರವನ್ನು ಒದಗಿಸುವುದು.<br>(ii) ತರಗತಿಗಳು, ಆಟದ ಪ್ರದೇಶಗಳು, ಶೌಚಾಲಯಗಳು, ಕುಡಿಯುವ ನೀರು, ಪ್ರಯೋಗಾಲಯ, ಮಕ್ಕಳ ಕೊಠಡಿಗಳಂತಹ ಶಾಲಾ ಸೌಲಭ್ಯಗಳು ಅಂಗವಿಕಲ ಮಕ್ಕಳಿಗೆ ಸುಲಭವಾಗಿ ಪ್ರವೇಶಿಸುವಂತಿರಬೇಕು.<br>(iii) ಶಾಲೆ ಮತ್ತು ಸಂಬಂಧಪಟ್ಟ ಪ್ರಾಧಿಕಾರವು ವಿಶೇಷ ಅವಶ್ಯಕತೆಗಳೊಂದಿಗೆ ಮಕ್ಕಳಿಗಾಗಿ ಶಾಲೆಯಿಂದ ಒದಗಿಸಲಾದ ಎಲ್ಲಾ ಸಹಾಯಕ ಸಾಧನಗಳನ್ನು ಮತ್ತು ಉಪಕರಣಗಳನ್ನು ಉತ್ತಮ ಸ್ಥಿತಿಯಲ್ಲಿಟ್ಟಿರಬೇಕು. | | ಎಮ್ |
| 17 | (i) ಶಾಲೆಯು ಸಾರ್ವಜನಿಕರ ಕುಂದು ಕೊರತೆಗಳ ನಿವಾರಣಾ ವ್ಯವಸ್ಥೆಯೊಂದಿಗೆ ವಿಶೇಷವಾಗಿ ತುರ್ತು ಸ್ಥಿತಿಗಳಲ್ಲಿ ಪ್ರಕಟಣೆಗಳನ್ನು ಮಾಡಲು ಸಾಧ್ಯವಾದಷ್ಟು ಸಿದ್ಧಗೊಂಡಿರಬೇಕು.<br>(ii) ಪಿ.ಎ.ಎಸ್. ಲಭ್ಯವಿಲ್ಲದಿದ್ದರೆ, ಶಾಲಾ ಬೆಲ್‌ಗಳನ್ನು ಪ್ರಕಟಣೆಗಾಗಿ ಬಳಸುವುದು. | | ಎಮ್ |
| 18 | (i)ಶೈಕ್ಷಣಿಕ ಸಂಸ್ಥೆಯು ಸಿಗರೇಟ್‌ಗಳು ಮತ್ತು ಇತರೆ ತಂಬಾಕು ಉತ್ಪನ್ನಗಳ ಮಾರಾಟ ಮಾಡುವುದನ್ನು ಶೈಕ್ಷಣಿಕ ಸಂಸ್ಥೆಯ 100 ಗಜದ ಒಳಗಡೆ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಶಾಲಾ ಫಲಕದ ಮೇಲೆ ಪ್ರದರ್ಶಿಸುವುದು. | | ಎಮ್ |

| ಕ್ರ ಸಂ | ಕ್ರಮಗಳು / ಸೂಚಕಗಳು | ಪ್ರತಿಯೊಂದು ಸೂಚಕಕ್ಕೆ 'ಹೌದು' ಅಥವಾ 'ಇಲ್ಲ' ಎಂದು ಗುರುತಿಸುವುದು | ಕಡ್ಡಾಯವಾಗಿ (ಎಮ್)/ಶಿಫಾರಸ್ಸು ಮಾಡಿದ(ಆರ್)/ ಅನ್ವಯಿಸುವುದಿಲ್ಲ (ಎನ್‌ಎ) |
|---|---|---|---|
| | (ii) ಶಾಲೆಯ ಹತ್ತಿರದಲ್ಲಿ ಅಶ್ಲೀಲ ವಸ್ತುಗಳನ್ನು ಪ್ರದರ್ಶಿಸುವುದು ಅಥವಾ ಶಾಲೆಯ ಹತ್ತಿರದಲ್ಲಿ ಮಾದಕ ವಸ್ತುಗಳ ಮಾರಾಟ ಮಾಡುವುದು ಅಥವಾ ಮಾರಾಟ ಮಾಡಲು ಪ್ರಯತ್ನಿಸುವುದು ಕಂಡು ಬಂದ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿಯು ಅದರ ಬಗ್ಗೆ ಶಿಕ್ಷಣ ಇಲಾಖೆಗೆ ವರದಿಗಳನ್ನು ಸಲ್ಲಿಸುವುದು. | | |

**ಭಾಗ 1 : ಬಿ ಆರೋಗ್ಯ**

| ಕ್ರ ಸಂ | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ / ಶಿಫಾರಸ್ಸು ಮಾಡಿದ |
|---|---|---|---|
| 1 | ಶಾಲೆಯಲ್ಲಿ ತುರ್ತು ಸನ್ನಿವೇಶಗಳಿಗೆ ಅಗತ್ಯವಾದ ಸಾಧನಗಳನ್ನು ಒಳಗೊಂಡ ಅವಧಿ ಮುಕ್ತಾಯಗೊಂಡಿರದ ಪ್ರಥಮ ಚಿಕಿತ್ಸಾ ಕಿಟ್ ಇರಬೇಕು. | | ಎಮ್ |
| 2 | ಹತ್ತಿರ ಲಭ್ಯವಿರುವ ವೈದ್ಯರು, ಆಸ್ಪತ್ರೆ, ಆಂಬುಲೆನ್ಸ್, ಖಾಸಗಿ ಸೇವೆಯನ್ನೊಳಗೊಂಡು ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸುವುದು ಮತ್ತು ಇಂದಿನ ದೂರವಾಣಿ ಸಂಖ್ಯೆಗಳನ್ನು ನೀಡುವುದು<br>(i) ವೈದ್ಯರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ.<br>(ii) ಆಸ್ಪತ್ರೆಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ.<br>(iii) ಆಂಬುಲೆನ್ಸ್‌ನ ದೂರವಾಣಿ ಸಂಖ್ಯೆ.<br>(iv) ತುರ್ತು ಆಂಬುಲೆನ್ಸ್‌ನ ಸಂಖ್ಯೆ 108. | | ಎಮ್ |
| 3 | ಶಾಲೆಯು ತುರ್ತು ಸಮಯದಲ್ಲಿ ಆಂಬುಲೆನ್ಸ್ ಸೇವೆಗಳಿಗಾಗಿ ಕರಸಿಕೊಳ್ಳುವುದು ಮತ್ತು ಬಳಸಿಕೊಳ್ಳುವುದು(ಅಂಬುಲೆನ್ಸ್ ಸಹಾಯವಾಣಿ ಸಂಖ್ಯೆ 108) | | ಎಮ್ |
| 4 | ಶಾಲೆಯು, ಶಿಕ್ಷಣ/ಆರೋಗ್ಯ ಇಲಾಖೆಯಿಂದ ನಿಗದಿಪಡಿಸಿದಂಥ ಆರೋಗ್ಯ ತಪಾಸಣೆಗಳನ್ನು ನಿಯಮಿತವಾಗಿ ಮಾಡಿಸುವುದು ಮತ್ತು ಶಾಲೆಯು ಎಲ್ಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವೈದ್ಯಕೀಯ ದಾಖಲಾತಿಗಳನ್ನು ವೈಯುಕ್ತಿಕವಾಗಿ ನಿರ್ವಹಿಸಿ ಇಂದಿನವರೆಗೆ ಮಾಹಿತಿಯನ್ನು ಒದಗಿಸುವುದು. | | ಎಮ್ |
| 5 | ರಕ್ತದ ಗುಂಪುಗಳು, ಅಲರ್ಜಿಗಳಿಗೆ ನೀಡುವ ಅಗತ್ಯವಿರುವಂತಹ ಪ್ರಮುಖ ಔಷಧಗಳಂತಹ ನಿರ್ದಿಷ್ಟ ಮತ್ತು ಪ್ರಮುಖ ಮಾಹಿತಿ ಹಾಗೂ ಮೂರ್ಛೆರೋಗ, ಮಾನಸಿಕ – ಭಾವನಾತ್ಮಕ ಸಮಸ್ಯೆಗಳಂಥ ನಿರ್ದಿಷ್ಟ ಆರೋಗ್ಯ ಸಮಸ್ಯೆಗಳ ಬಗ್ಗೆ ಮಾಹಿತಿ ಲಭ್ಯವಾಗುವಂತಿರಬೇಕು ಮತ್ತು ಅದನ್ನು ಪೋಷಕರ ಸಹಾಯದೊಂದಿಗೆ ತಹಲ್‌ವರೆಗಿನ ಮಾಹಿತಿಯನ್ನು ಒದಗಿಸುವುದು. | | ಆರ್ |
| 6 | ತುರ್ತು ಪರಿಸ್ಥಿತಿಗಳಲ್ಲಿ ವೈದ್ಯರನ್ನು ಕರೆಯುವುದು. | | ಎಮ್ |
| 7 | ಶಾಲೆಯು, ಶಾಲೆಗೆ ಸಮೀಪವಾಗಿರುವ ಸ್ಥಳೀಯ ಆಸ್ಪತ್ರೆಯೊಂದಿಗೆ ಸಂಪರ್ಕ ಇಟ್ಟುಕೊಳ್ಳಬೇಕು. | | ಎಮ್ |
| 8 | ಕ್ಯಾಂಟೀನ್ ಶಾಲಾ ಆವರಣದ ಯಾವುದೇ ಸ್ಥಳದಲ್ಲಿ ಆಹಾರವನ್ನು ಅಥವಾ ಯಾವುದೇ ತಿಂಡಿ ಪದಾರ್ಥಗಳನ್ನು ಒದಗಿಸುವುದು ಕಾನೂನು ಮೇರೆಗೆ ಅನ್ವಯವಾಗುವಂತೆ ನೋಂದಾಯಿತವಾದ ಆಹಾರ ಲೈಸನ್ಸ್ ಅನ್ನು ಹೊಂದಿರಬೇಕು. | | ಎಮ್ |
| 9 | ಉತ್ತಮ ಗುಣಮಟ್ಟದ ಮಧ್ಯಾಹ್ನದ ಬಿಸಿ ಊಟವನ್ನು ಶಿಕ್ಷಕರು ಅಥವಾ ಸಿಬ್ಬಂದಿಯ ಮೇಲ್ವಿಚಾರಣೆಯ ಮೇರೆಗೆ ನಿರ್ವಹಿಸುವುದು. | | ಆರ್ |

| ಕ್ರ ಸಂ | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ / ಶಿಫಾರಸ್ಸು ಮಾಡಿದ |
|---|---|---|---|
| 10 | ಸಮತೋಲಿತಾ ಆಹಾರ, ಜಂಕ್ ಫುಡ್‌ಗಳಿಗೆ ಪರ್ಯಾಯವಾಗಿ ಪೌಷ್ಠಿಕ ಆಹಾರ ನಿಯಮಿತವಾಗಿ ತಿನ್ನುವ ಅಭ್ಯಾಸಗಳು, ವೈಯುಕ್ತಿಕ ಸ್ವಚ್ಛತೆ ಇತ್ಯಾದಿ ಸೇರಿದಂತೆ ಆರೋಗ್ಯ ಅಂಶಗಳ ಮೇಲೆ ವಿದ್ಯಾರ್ಥಿಗಳಿಗೆ ಆರೋಗ್ಯ ಶಿಕ್ಷಣ ನೀಡುವುದು. | | ಆರ್ |

ಭಾಗ 1. ಸಿ ಸಾರಿಗೆ

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ / ಶಿಫಾರಸ್ಸು ಮಾಡಿದ |
|---|---|---|---|
| 1 | (i) ಮೋಟಾರು ವಾಹನಗಳ ಅಧಿನಿಯಮ, 1988ರ 74ನೇ ಪ್ರಕರಣದ ಮೇರೆಗೆ ವಾಹನದ ಪರ್ಮಿಟ್‌ನ್ನು ಹೊಂದಿರಬೇಕು.<br>(ii) ಶಾಲೆಯು ಅಥವಾ ಶಾಲಾ ಕರ್ತವ್ಯದ ಮೇಲೆ ಸಾರಿಗೆ ವ್ಯವಸ್ಥೆಗಾಗಿ ಮಕ್ಕಳಿಗಾಗಿ ಬಳಸಲಾದ ಶಾಲಾ ಬಸ್ಸು, ವ್ಯಾನ್, ಕ್ಯಾಬ್‌ನಂತವುಗಳು ಶಾಲೆಯ ಮಾಲೀಕತ್ವದಲ್ಲಿ ಅಥವಾ ನಿರ್ವಹಿಸುವ ಎಲ್ಲಾ ವಾಹನಗಳು ಆರ್.ಟಿ.ಓ ಅವರಿಂದ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರಬೇಕು.<br>(iii) ವಾಹನವು ನೋಂದಣಿಯ ದಿನಾಂಕದಿಂದ 15 ವರ್ಷಗಳನ್ನು ಮೀರತಕ್ಕದ್ದಲ್ಲ. | | ಎಮ್<br>ಎಮ್<br>ಎಮ್ |
| 2 | (i) ಶಾಲಾ ಬಸ್ಸುಗಳು, ವ್ಯಾನ್‌ಗಳು ಹೊರಗಿನ ವಾಹನದ ಸ್ವರೂಪದ ಗುಣಮಟ್ಟಗಳು ಆರ್.ಟಿ.ಓ ಮಾನದಂಡಗಳಿಗೆ ಅನುಗುಣವಾಗಿರುವುದು.<br>(ii) ಶಾಲಾ ಮಕ್ಕಳಿಗಾಗಿ ಕಾರ್ಯ ನಿರ್ವಹಿಸುವ ಪ್ರತಿಯೊಂದು ಬಸ್ಸಿನ ಹಿಂಭಾಗ ಮತ್ತು ಮುಂಭಾಗದ ಮೇಲೆ ಎದ್ದು ಕಾಣುವಂತೆ "ಶಾಲಾ ವಾಹನ" ಎಂದು ಬರೆದಿರಬೇಕು. ಮತ್ತು<br>(iii) ಬಸ್ಸು ಬಾಡಿಗೆಯದ್ದಾಗಿದ್ದರೆ, "ಶಾಲಾ ಕರ್ತವ್ಯದ ಮೇಲೆ" ಎಂದು ಎದ್ದುಕಾಣುವಂತೆ ಪ್ರದರ್ಶಿಸಿರಬೇಕು.<br>(iv) ಶಾಲೆಯ ಹೆಸರು ಮತ್ತು ದೂರವಾಣಿಯ ಸಂಖ್ಯೆಯನ್ನು ಬಸ್ಸಿನ ಮೇಲೆ ಬರೆದಿರಬೇಕು. | | ಎಮ್ |
| 3 | ವಾಹನ ಚಾಲಕರು:<br>(i) ಬಳಸಿಕೊಳ್ಳುವ ಪ್ರತಿಯೊಬ್ಬ ಚಾಲಕನು, ಭಾರಿ ವಾಹನಗಳ ಚಾಲನೆಯಲ್ಲಿ ಕನಿಷ್ಠ 5 ವರ್ಷಗಳು ಅಥವಾ ಸಾರಿಗೆ ವಾಹನದ ಚಾಲನೆಯಲ್ಲಿ ಲಘು ಮೋಟಾರು ವಾಹನ ಲೈಸನ್ಸ್‌ನ್ನು ಹೊಂದಿದ್ದು, ಕನಿಷ್ಠ 4 ವರ್ಷಗಳ ಅನುಭವವಿರಬೇಕು.<br>(ii) ಚಾಲಕರು ಹಿಂದಿನ ಯಾವುದೇ ಸಂಚಾರಿ ಅಪರಾಧಗಳನ್ನು ದಾಖಲೆಯಲ್ಲಿರುವಂತೆ ಮಾಡಿರಬಾರದು.<br>(iii) ಚಾಲಕರ ಹಿನ್ನೆಲೆಯನ್ನು ಪರೀಕ್ಷಿಸಿರಬೇಕು / ಪರಿಶೀಲಿಸಿರಬೇಕು.<br>(iv) ಆತನು / ಆಕೆಯು ಶಾಲಾ ಕರ್ತವ್ಯದ ಮೇಲಿರುವಾಗ ಆಲ್ಕೋಹಾಲ್‌ನಿಂದ ಪ್ರಭಾವಿತರಾಗಿರುವುದಿಲ್ಲವೆಂದು ನಿಯಮಿತವಾಗಿ ಪರಿಶೀಲನೆಗಳಿಂದ ಖಚಿತಪಡಿಸಿಕೊಳ್ಳುವುದು.<br>(v) ಚಾಲಕರ ಮತ್ತು ಸಹಾಯಕರ ಶೈಕ್ಷಣಿಕ ಸಂಸ್ಥೆಯ ಸಂರಕ್ಷಣೆ ಮತ್ತು ಕಿರುಕುಳ ನೀತಿಗಳ ಮೇಲೆ ನಿಯಮಿತವಾಗಿ ಸೂಕ್ಷ್ಮಗ್ರಾಹಿಗಳಾಗಿರಬೇಕು.<br>(vi)ಚಾಲಕರು ವಾಹನವನ್ನು ಉತ್ತಮ ಮತ್ತು ಸುರಕ್ಷಿತ ಸ್ಥಿತಿಯಲ್ಲಿಟ್ಟುಕೊಳ್ಳುವುದು. | | ಎಮ್ |
| 4 | ಪರಿಚಾರಕರು:<br>(i) ಶಿಕ್ಷಕರು ಅಥವಾ ಪರಿಚಾರಕರು, ಚಾಲಕಿಯರು ಬಸ್ಸಿನಲ್ಲಿರುವಾಗ ಆದ್ಯತೆಯನುಸಾರ ಮಹಿಳಾ ಪರಿಚಾರಕಿ ಕೊನೆಯ ನಿಲ್ದಾಣದವರೆಗೆ ಶಾಲಾ ಬಸ್ಸಿನಲ್ಲಿ ಮಕ್ಕಳ ಜೊತೆಯಲ್ಲೇ ಇರುವುದು.<br>(ii) ಮಕ್ಕಳನ್ನು ಕರೆದುಕೊಂಡು ಹೋಗುವುದಕ್ಕಾಗಿ / ಬಿಡುವುದಕ್ಕಾಗಿ ಶಾಲೆಯ ಮುಂಭಾಗದಲ್ಲಿ ವಾಹನಗಳ ಚಾಲನೆಯ ಜವಾಬ್ದಾರಿ ಇರುವ ವ್ಯಕ್ತಿ / ಭದ್ರತೆಗಾರನು ಮೇಲ್ವಿಚಾರಣೆಯನ್ನು ವಹಿಸುವುದು. | | ಎಮ್ |
| 5 | (i) ಆಂತರಿಕ ಕ್ರಮಗಳು<br>(ii) ಬಸ್ಸಿನ ಕಿಟಕಿಗಳಿಗೆ ಅಡ್ಡವಾದ ಗ್ರಿಲ್‌ಗಳಿರಬೇಕು.<br>(iii) ಶಾಲಾ ಬಸ್ಸು / ಕಾರು / ವ್ಯಾನ್ / ಕ್ಯಾಬ್‌ಗಳು ಪ್ರಥಮ ಚಿಕಿತ್ಸಾ ಪೆಟ್ಟಿಗೆಯೊಂದಿಗೆ, ಅಗ್ನಿಶಾಮಕ ಸಾಮಗ್ರಿಗಳು ಸುಸಜ್ಜಿತವಾಗಿರಬೇಕು. | | ಎಮ್ |

| | | | |
|---|---|---|---|
| | (iv) ಬಾಗಿಲುಗಳು ಲಾಕಿಂಗ್ ವ್ಯವಸ್ಥೆಯನ್ನು ಮತ್ತು ಬಾಗಿಲುಗಳ ಲಾಕ್‌ಗಳು ಭದ್ರತೆಯನ್ನು ಹೊಂದಿರಬೇಕು.<br><br>(v) ತುರ್ತು ನಿರ್ಗಮನ ದ್ವಾರಗಳು ಉತ್ತಮ ಕಾರ್ಯನಿರ್ವಹಣಾ ಸ್ಥಿತಿಯಲ್ಲಿರಬೇಕು ಹಾಗೂ ತುರ್ತು ಸಂದರ್ಭಗಳಲ್ಲಿ ಇಳಿಯುವುದಕ್ಕೆ ಮಕ್ಕಳಿಗೆ ನಿರ್ಗಮನ ದ್ವಾರಗಳ ಬಳಿ ಯಾವುದೇ ಅಡೆತಡೆಗಳಿರಬಾರದು. ತುರ್ತು ನಿರ್ಗಮನದ ದ್ವಾರಗಳ ಎರಡು ಕಡೆಗಳಲ್ಲಿ ಕೆಂಪು ಬಣ್ಣದಲ್ಲಿ ಬರೆದಿರಬೇಕು.<br><br>(vi) ಶಾಲಾ ಬ್ಯಾಗ್‌ಗಳನ್ನು ಸುರಕ್ಷಿತವಾಗಿ ಇಡುವುದಕ್ಕೆ ಸೀಟುಗಳ ಕೆಳಗೆ ಸ್ಥಳವನ್ನು ಒದಗಿಸುವುದು.<br><br>(vii) ವೇಗ ನಿಯಂತ್ರಣವನ್ನು ಗರಿಷ್ಠ 40 ಕಿ.ಮೀ.ಗಳ ವೇಗದಲ್ಲಿ ಅಳವಡಿಸಬೇಕು<br><br>(viii) ಲಿಕ್ವಿಡ್ ಪೆಟ್ರೋಲಿಯಂ, ಗ್ಯಾಸ್‌ನ ಸೌಲಭ್ಯವನ್ನು ಪಡೆದರೆ ಅದನ್ನು ಕಿಟ್ ಸರಬರಾಜುದಾರರಿಂದ ಅನುಮೋದಿಸಿರತಕ್ಕದ್ದು ಮತ್ತು ನೋಂದಣಿ ಪ್ರಾಧಿಕಾರದಿಂದ ಪ್ರಮಾಣೀಕರಿಸಿರಬೇಕು ಮತ್ತು ಲಿಕ್ವಿಡ್ ಪೆಟ್ರೋಲಿಯಂ, ಗ್ಯಾಸ್‌ನ್ನು ಸೀಟಿನ ಸ್ಥಳದಲ್ಲಿ ಜೋಡಿಸಬಾರದು.<br><br>(ix) ಶಾಲಾ ಮಕ್ಕಳನ್ನು ಕರೆದುಕೊಂಡು ಹೋಗುವ ವಾಹನಗಳ ಮೇಲೆ ಬಣ್ಣದ ಗ್ಲಾಸುಗಳನ್ನು ನಿಷೇಧಿಸಲಾಗಿದೆ. | | |
| 6 | **ಆಸನ ವ್ಯವಸ್ಥೆ**<br>ವಾಹನಗಳಲ್ಲಿ ಪ್ರಯಾಣಿಸುವುದಕ್ಕೆ ಅನುಮತಿಸಲಾದ ಮಕ್ಕಳ ಸಂಖ್ಯೆಯನ್ನು ಒಳಗೊಂಡಂತೆ ಆರ್.ಟಿ.ಓ.ದ ಎಲ್ಲಾ ಷರತ್ತುಗಳನ್ನು ಚಾಲಕನು ಅನುಸರಿಸುವುದು. | | ಎಮ್ |
| 7 | ಸುರಕ್ಷತಾ ಸೂಚನೆಗಳನ್ನು ಬಸ್ಸಿನ ಒಳಗಡೆ ಪ್ರದರ್ಶಿಸಬೇಕು. | | ಎಮ್ |
| 8 | ಸೂಕ್ತವಾದ ಸಂಚಾರ ಸಿಗ್ನಲ್‌ಗಳಲ್ಲಿ, (ಮುಖ್ಯ ರಸ್ತೆಗಳಲ್ಲಿ) ಅಗತ್ಯಪಡಿಸಲಾದಂತೆ, ಸಂಚಾರ ದಟ್ಟಣೆ ರಸ್ತೆಗಳು, ಹೆದ್ದಾರಿಗಳು, ಇತ್ಯಾದಿಗಳಲ್ಲಿ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮುಖ್ಯ ದ್ವಾರದ ಪಕ್ಕದಲ್ಲಿ ವೇಗ ನಿಯಂತ್ರಕಗಳಿರಬೇಕು. | | ಎಮ್ |
| 9 | **ಆಟೋರಿಕ್ಷಾಗಳು:**<br>(i) ಸಂಬಂಧಪಟ್ಟ ಪ್ರಾಧಿಕಾರವು, ಆಟೋರಿಕ್ಷಾಗಳಲ್ಲಿ ಶಾಲೆಗೆ ಬರುವ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕು.<br><br>(ii)ಶಾಲೆಯು, ಆರ್.ಟಿ.ಓ.ದ ನಿಯಮದ ಪ್ರಕಾರ ಬಾಡಿಗೆಗೆ ಸೀಮಿತಗೊಳಿಸಿದ ಸಂಖ್ಯೆಗೆ ಅನುಗುಣವಾಗಿ ಆಟೋಗಳಲ್ಲಿ ಮಕ್ಕಳ ಸಂಖ್ಯೆಯು ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಪೋಷಕರು ಸೂಚಿಸುವುದು.<br><br>(iii) ನೋಂದಾಯಿತ ಆಟೋಗಳು ಮತ್ತು ಚಾಲಕರ ವಿವರಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. | | ಎಮ್ |

**ಭಾಗ II– ವೈಯುಕ್ತಿಕ ಮತ್ತು ಲೈಂಗಿಕ ಸುರಕ್ಷತೆ**

| ಕ್ರ ಸಂ | ಕ್ರಮಗಳು / ಸೂಚಕಗಳು | ಹೌದು / ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 1 | ಶಾಲೆಯು ಯಾವುದೇ ಮಗುವನ್ನು ದುರುಪಯೋಗಪಡಿಸಿಕೊಳ್ಳುವ ಅಥವಾ ಸುರಕ್ಷತಾ ಉಲ್ಲಂಘನೆಗಳನ್ನು ಮಾಡಿದವರ ವಿರುದ್ಧ ಮಕ್ಕಳ ಸುರಕ್ಷತಾ ನೀತಿಯಲ್ಲಿ ಕಠಿಣ ಕ್ರಮ ಕೈಗೊಳ್ಳುವುದು. ಎಲ್ಲಾ ಮಕ್ಕಳು ನಿಯಮಿತವಾಗಿ ವೈಯುಕ್ತಿಕ ಸುರಕ್ಷಿತರಾಗಿರುತ್ತಾರೆ. ಅದು "ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ ವರ್ತನೆ"ಯಂಥ ಮಾಹಿತಿಯು ಸೇರಿದಂತೆ ಮತ್ತು ವ್ಯಕ್ತಿಯು ವೈಯುಕ್ತಿಕ ಸುರಕ್ಷತೆಯ ಮಾನದಂಡಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅವರನ್ನು ಸಂಪರ್ಕಿಸುವುದು. ಮಕ್ಕಳ ಲೈಂಗಿಕ ದುರುಪಯೋಗದ ಬಗ್ಗೆ ಅರಿವು ಮೂಡಿಸಿ ಅದನ್ನು ಗುರುತಿಸುವುದು ಹೇಗೆ, ಪ್ರತಿರೋಧಿಸುವುದು ಮತ್ತು ದುಷ್ಕರ್ಮಿಗಳ ಬಗ್ಗೆ ವರದಿ ಸಲ್ಲಿಸುವುದು ಮತ್ತು ಸುರಕ್ಷತೆಯ ಬಗ್ಗೆ ಮಕ್ಕಳಿಗಾಗಿ ಸೂಕ್ತ ವಯಸ್ಸಿನ ತರಬೇತಿ ಬಗ್ಗೆ ಬೋಧಕರು, ಬೋಧಕೇತರ ಸಿಬ್ಬಂದಿ ಮತ್ತು ಪೋಷಕರಿಗಾಗಿ ಸಭೆಯನ್ನು ಆಯೋಜಿಸಬೇಕು. ಶಾಲೆಯು ತರಬೇತಿ, ದಿನಾಂಕಗಳು, ಸಂಪನ್ಮೂಲ ವ್ಯಕ್ತಿಯ ಸಂಪರ್ಕ ಇತ್ಯಾದಿ ಶಾಲಾ ದಾಖಲೆಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. | | ಎಮ್ |
| 2 | (i) ಶಾಲೆಯ ಶಿಕ್ಷಕರು 1 ರಿಂದ 12ನೇ ತರಗತಿಯವರೆಗಿನ ವಯಸ್ಸಿನ ಮಕ್ಕಳಿಗೆ ಲಿಂಗಸೂಕ್ಷ್ಮತೆ ಕುರಿತು ಸೂಕ್ತ ತರಬೇತಿಗಾಗಿ ಸೇರಿಸುವುದು.<br><br>(ii) ಬಾಲ ನ್ಯಾಯ ಅಧಿನಿಯಮ, 2015 ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ, 2012ರ ಕಾನೂನಿನ ಅಡಿಯಲ್ಲಿ ಲಿಂಗ ಸಂವೇದನೆ, ಅಂಗವೈಕಲ್ಯ ಸಂವೇದನೆ, ಸಾಮಾಜಿಕ ಹೊಣೆಗಾರಿಕೆ, ಸಹಪಾಠಿಗಳೊಂದಿಗೆ ಘನತೆ ಮತ್ತು ಗೌರವದಿಂದ ನಡೆದುಕೊಳ್ಳುವುದು, ವಸ್ತು ದುರ್ಬಳಕೆ ಹಾನಿಕಾರಕ ಪರಿಣಾಮಗಳು, ದಂಡ ವಿಧಿಸುವುದು ಸೇರಿದಂತೆ ಕಾನೂನು ಬಾಹಿರ ವರ್ತನೆಗಳು ಮತ್ತು ಕ್ರಮಗಳ ಪರಿಣಾಮಗಳ ಬಗ್ಗೆ ಬೋಧಿಸುವುದು. | | ಎಮ್ |

| ಕ್ರ ಸಂ | ಕ್ರಮಗಳು / ಸೂಚಕಗಳು | ಹೌದು / ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 3 | (i) ಶಾಲೆಯು ಬೋಧನೆಗಾಗಿ ತರಬೇತಿ ಪಡೆದುಕೊಳ್ಳುತ್ತಿರುವ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆ, ಮಕ್ಕಳ ಸಂರಕ್ಷಣೆ ಮತ್ತು ಮಗುವಿನ ಅಭಿವೃದ್ಧಿ, ಮಗುವಿನ ದುರುಪಯೋಗ ಮತ್ತು ಸಂಬಂಧಿಸಿದ ವಿಷಯಗಳ ಮೇಲೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ತರಬೇತಿಯನ್ನು ಕೈಗೊಳ್ಳುವುದು.<br>(ii) ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿ ಮಕ್ಕಳಲ್ಲಿನ ದುರುಪಯೋಗದ ಲಕ್ಷಣಗಳನ್ನು ಗುರುತಿಸುವುದಕ್ಕೆ ತರಬೇತಿಯನ್ನು ನೀಡುವುದು ಮತ್ತು ಶಾಲೆಗಳಲ್ಲಿ ವರದಿ ಮಾಡಿಕೊಳ್ಳುವಾಗ ಅಸ್ತಿತ್ವದಲ್ಲಿರುವ ಕಾನೂನುಗಳ ಮೇರೆಗೆ ಸೂಕ್ತ ಕ್ರಮ ಕೈಗೊಳ್ಳುವುದು. | | ಎಮ್ |
| 4 | ಮಕ್ಕಳ ಪೋಷಣೆ ಮತ್ತು ಆರೋಗ್ಯಕರವಾದ ವಾತಾವರಣವನ್ನು ನಿರ್ಮಿಸುವುದು ಮತ್ತು ಶಿಕ್ಷಕರೊಂದಿಗೆ ವಿಶ್ವಾಸದಿಂದ ಅವರ ವೈಯುಕ್ತಿಕ ವಿಷಯಗಳನ್ನು ಹಂಚಿಕೊಳ್ಳುವುದಕ್ಕೆ ಪೂರಕ ವಾತಾವರಣ ನಿರ್ಮಿಸುವುದು. | | ಆರ್ |
| 5 | ತರಗತಿಗಳನ್ನು ಒಳಗೊಂಡಂತೆ ಶಾಲೆಗಳಲ್ಲಿ ಮಾತೃ ಭಾಷೆಯಲ್ಲಿ ಸಹಿಯನ್ನು ಮಾಡುವ ತರಬೇತಿಯನ್ನು ಸಹ ನೀಡತಕ್ಕದ್ದು ಮತ್ತು ವಾಕ್ ಮತ್ತು ಶ್ರವಣ ಮತ್ತು ದೃಷ್ಟಿಯಲ್ಲಿ ದುರ್ಬಲತೆ ಇರುವ ಮಕ್ಕಳು ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಲು ಬ್ರೈಲಿ ಲಿಪಿಯನ್ನು ಕಲಿಸುವುದು. | | |

**ಅಪರಾಧ ಅಥವಾ ಉಲ್ಲಂಘನೆಯನ್ನು ವರದಿ ಮಾಡುವುದಕ್ಕಾಗಿ ಯಾಂತ್ರಿಕ ಕೌಶಲ್ಯ ರಕ್ಷಣೆ ಪ್ರಕ್ರಿಯೆಗಳು ಮತ್ತು ವೈಯಕ್ತಿಕ ಹಾಗೂ ಲೈಂಗಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವ ಇತರೆ ಪ್ರಕ್ರಿಯೆಗಳನ್ನು ಭಾಗ –IVಎ, ಬಿ ಮತ್ತು ಸಿ ಪ್ರಕರಣದಲ್ಲಿ ನೀಡಲಾಗಿದೆ.**

**ಭಾಗ–III– ಎ ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ**

| ಕ್ರ ಸಂ | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 1 | (i)ಸಮಾನಸ್ಕಂದ ಭಾವನೆಗಳು ಸೇರಿದಂತೆ ಭಾವನಾತ್ಮಕ ಮತ್ತು ಆರೋಗ್ಯಕರ ಸಂಬಂಧಗಳನ್ನು ರೂಪಿಸುವಂತೆ ನಿರ್ವಹಿಸಿ ಸಾಕಷ್ಟು ವಯಸ್ಸಿನವರಿಗೆ ಸೂಕ್ತ ಸಾಮಾಜಿಕ ಕೌಶಲ್ಯಗಳ ಮೇಲೆ ಮಕ್ಕಳಿಗೆ ಮಾರ್ಗದರ್ಶನ ಮತ್ತು ತರಬೇತಿ ನೀಡುವುದು. | | ಆರ್ |
| | (ii)ಅಸಮರ್ಥತೆಯ ಸೂಕ್ಷ್ಮ ಸಂವೇದನೆ ಮತ್ತು ವಿಶೇಷ ಅವಶ್ಯಕತೆಗಳೊಂದಿಗೆ ಮಕ್ಕಳ ಅವಶ್ಯಕತೆಗಳನ್ನೊಳಗೊಂಡಂತೆ ತರಬೇತಿ ನೀಡುವುದು. | | |
| 3 | ಜೀವನ ಕೌಶಲ್ಯಗಳು, ಪರೀಕ್ಷೆ ಸಿದ್ಧತೆಯ ಮೇಲೆ ವಿದ್ಯಾರ್ಥಿಗಳಿಗಾಗಿ ಸಭೆಗಳನ್ನು ನಡೆಸುವುದು ಮತ್ತು ಭಯವನ್ನು ಹೋಗಲಾಡಿಸುವುದಕ್ಕೆ ಕೌಶಲ್ಯಗಳನ್ನು ಕಲಿಸುವುದು, ಕೋಪ, ಒತ್ತಡದ ಮಟ್ಟ, ಬೆದರಿಸುವ ಮತ್ತು ಸ್ವಯಂ ಹಾಗೂ ಇತರರ ಮೇಲೆ ದುರುಪಯೋಗವನ್ನು ತಡೆಯುವುದು ಮತ್ತು ವಿದ್ಯಾರ್ಥಿಗಳ ನಡುವೆ ವಿಶ್ವಾಸ ಮೂಡಿಸುವುದು. | | ಆರ್ |
| 4 | ಕಳ್ಳತನ, ಗೋಡೆಗಳನ್ನು ವಿರೂಪಗೊಳಿಸುವುದು, ಮತ್ತೊಬ್ಬ ವಿದ್ಯಾರ್ಥಿಗೆ ತೊಂದರೆ ಕೊಡುವುದು, ದುರ್ನಡತೆ ಮತ್ತು ಸೂಕ್ತವಲ್ಲದ ಸಾಮಾಜಿಕ ನಡವಳಿಕೆಗಳು ಅಥವಾ ದೈಹಿಕ ಅಥವಾ ಮಾನಸಿಕವಾಗಿ ವಯಸ್ಕರನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಸೂಕ್ತವಾದ ಮತ್ತು ಸಂವೇದನಾಶೀಲ ರೀತಿಯಲ್ಲಿ ಪ್ರಗತಿಯ ಭಾಷಣ ಮಾಡುವುದು. | | ಎಮ್ |
| 5 | ಸಲಹಾ ಸೇವೆಗಳು ಅಥವಾ ಉಲ್ಲೇಖಗಳು ಲಭ್ಯವಿರುವಂತೆ ಮಾಡುವುದು ಮತ್ತು ಮಕ್ಕಳಿಗೆ ಅದರ ಬಗ್ಗೆ ಅರಿವು ಮೂಡಿಸುವುದು. | | ಎಮ್ |
| 6 | ವಿದ್ಯಾರ್ಥಿಗಳು ಇತರೆ ಮಕ್ಕಳೊಂದಿಗೆ ಪರಸ್ಪರ ಸಂವಾದ ನಡೆಸುವುದಕ್ಕಾಗಿ ನೀತಿ ಸಂಹಿತೆ(ನಡವಳಿಕೆ ಮಾರ್ಗದರ್ಶನಗಳು) ಬಗ್ಗೆ ಅರಿವನ್ನು ಮೂಡಿಸುವುದು ಮತ್ತು ಮಕ್ಕಳಿಂದ ಮಕ್ಕಳಲ್ಲಿ ನಡೆಯುವ ದುರುಪಯೋಗಗಳನ್ನು ತಡೆಯುವುದು ಆಧಾರಿತವಾಗಿದೆ. | | ಎಮ್ |
| 7 | (i) ಸ್ವತಃ ಅಥವಾ ಇತರರ ದುರುಪಯೋಗದ ವರದಿಯನ್ನು ವಿದ್ಯಾರ್ಥಿಗಳಿಗಾಗಿ ಸುರಕ್ಷಿತವಾಗಿರಲು ಪ್ರಕ್ರಿಯೆಗಳನ್ನು ಕಾರ್ಯಗತಗೊಳಿಸುವುದು. | | ಎಮ್ |
| | (ii) ಶಿಸ್ತು ಮತ್ತು ಸಂರಕ್ಷಣಾ ವಿಷಯಗಳ ಬಗ್ಗೆ ಶಾಲೆಯಿಂದ ಒಲವು ಅಥವಾ ಪಕ್ಷಪಾತವಿಲ್ಲದೆ ತಿಳಿಸುವುದು. | | ಎಮ್ |
| 8 | ವಿದ್ಯಾರ್ಥಿಗಳಿಗಾಗಿ ಯೋಗ, ಧ್ಯಾನ ಮತ್ತು ಸ್ವಯಂರಕ್ಷಣೆ ಕಾರ್ಯಕ್ರಮಗಳನ್ನು ಆಯೋಜಿಸುವುದು. | | ಆರ್ |
| 9 | ಸಕಾರಾತ್ಮಕ ಶಿಸ್ತಿನ ವಿಧಾನಗಳು ಮತ್ತು ಕ್ರಮಗಳನ್ನು ಶಿಕ್ಷಕರು ಮತ್ತು ಶಾಲಾ ಪ್ರಾಧಿಕಾರಿಗಳಿಂದ ತೆಗೆದುಕೊಳ್ಳಲಾಗುವುದು ಮತ್ತು ಅನುಸರಿಸಲಾಗುವುದು. | | ಆರ್ |

| ಕ್ರ ಸಂ | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 10 | (i) ಶಾಲೆಯು ನಿಯಮಿತವಾಗಿ ಗೈರುಹಾಜರಿಯನ್ನು ಪುನರ್ ಪರಿಶೀಲಿಸುವುದು ಮತ್ತು ನಿಯಮಿತವಾಗಿ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುವುದು.<br>(ii) ಅಲ್ಪ ಸಾಧನೆ ಮಾಡುವ ಮಕ್ಕಳು, ವಿಶೇಷ ಅಗತ್ಯಗಳನ್ನು ಬಯಸುವ ಮಕ್ಕಳು (ವಿಶೇಷ ಚೇತನರು), ವಿಭಿನ್ನ ಸನ್ನಿವೇಶಗಳಲ್ಲಿರುವಂತಹ ಮಕ್ಕಳು ಹಾಗೂ ಶಾಲೆಯನ್ನು ಮಧ್ಯದಲ್ಲಿ ಬಿಡುವ ಸಂಭವವಿರುವ ಅಥವಾ ಮದುವೆಯಾಗುವ ಸಂಭವವಿರುವ ಮಕ್ಕಳಿಗೆ ಪೂರಕ ವ್ಯವಸ್ಥೆಗಳನ್ನು ಕಲ್ಪಿಸಬೇಕು. ಅಂಥ ಮಕ್ಕಳನ್ನು ಗುರುತಿಸಿ ಸೇವೆ ಹಾಗೂ ಪೂರಕ ವ್ಯವಸ್ಥೆಗಳನ್ನು ಕಲ್ಪಿಸುವುದರಿಂದ, ಇದು ಶಾಲಾ ವಾತಾವರಣದಲ್ಲಿ ಅವರನ್ನು ಉಳಿಸಿಕೊಳ್ಳಲು ಸಹಾಯವಾಗಬಹುದು.<br>(iii) ರಕ್ಷಣೆ ಮತ್ತು ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಪೂರಕ ಸೇವೆಗಳಿಗೆ ಸೂಕ್ತವಾದ ಉಲ್ಲೇಖಗಳನ್ನು ಮಾಡುವುದು | | ಆರ್ |

**ಅಪರಾಧ ಅಥವಾ ಉಲ್ಲಂಘನೆಯನ್ನು ವರದಿ ಮಾಡುವುದಕ್ಕಾಗಿ ಸಂರಕ್ಷಣೆಯ ಕಾರ್ಯ ವಿಧಾನಗಳು ಹಾಗೂ ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಇತರೆ ಪ್ರಕ್ರಿಯೆಗಳನ್ನು ಕೆಳಗಿನಂತೆ ಭಾಗ IV ಎ, ಬಿ, ಸಿ ಪ್ರಕರಣದಲ್ಲಿ ನೀಡಲಾಗಿದೆ**

**ಭಾಗ–IV ವೈಯಕ್ತಿಕ, ಲೈಂಗಿಕ ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆಗಾಗಿ ಪ್ರಕ್ರಿಯೆಗಳು ಮತ್ತು ಶಿಷ್ಟಾಚಾರಗಳು**

**ವಿಭಾಗ –IV ಎ : ಮಕ್ಕಳ ರಕ್ಷಣೆಯ ಕಾರ್ಯವಿಧಾನಗಳು**

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 1 | ಶಾಲೆಯು ಸೂಕ್ತವಾದ ಮಾರ್ಗದರ್ಶನಗಳು ಮತ್ತು ವರದಿ ಮಾಡುವ ಕಾರ್ಯವಿಧಾನಗಳೊಂದಿಗೆ ಸುರಕ್ಷಿತವಾದ ವಾತಾವರಣ ಮತ್ತು ದುರುಪಯೋಗ, ಹಾನಿ ಅಥವಾ ಶೋಷಣೆಯಿಂದ ಮಕ್ಕಳಿಗೆ ರಕ್ಷಣೆ ನೀಡುವುದಕ್ಕೆ ಮಕ್ಕಳ ರಕ್ಷಣಾ ನೀತಿಯ (ಶಾಲೆಯ ಸಿಪಿಪಿ) ನಿರ್ಧರಿಸಿರುವ ಸ್ಥಳದಲ್ಲಿರುವುದು. | | ಎಮ್ |
| 2 | ಶಾಲಾ ಮಕ್ಕಳ ರಕ್ಷಣಾ ನೀತಿ (ಸಿಪಿಪಿ) ದೃಢ ಹೇಳಿಕೆಗಳು ಈ ಮುಂದಿನಂತಿವೆ:<br>(i) ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಂದ ದೈಹಿಕ ಶಿಕ್ಷೆ ಮತ್ತು ಮಾನಸಿಕ ಕಿರುಕುಳ ನೀಡುವುದನ್ನು ನಿಷೇಧಿಸುವುದು. | | ಎಮ್ |
| | (ii) ಎಲ್ಲಾ ವಿಧದ ಬೆದರಿಕೆಗಳನ್ನು ವಿರೋಧಿಸುವುದು ಮತ್ತು ಶಾಲೆಯ ಆವರಣಗಳಲ್ಲಿ ನಿಷೇಧಿಸುವುದು ಮತ್ತು ಬೆದರಿಸುವುದು, ಪೀಡಿಸುವುದು, ಟೀಕಿಸುವುದು, ಅಸಭ್ಯ ಭಾಷೆ ಮತ್ತು ದುರುದ್ದೇಶದ ಹರಟೆಗಳನ್ನು ತಡೆಯುವುದಕ್ಕೆ ವಿದ್ಯಾರ್ಥಿಗಳನ್ನು ದೂರವಿಡುವಂತೆ ನೋಡಿಕೊಳ್ಳುವುದು. | | |
| | (iii) ಶಾಲೆಯು ಧರ್ಮ, ಆರ್ಥಿಕ ಸ್ಥಾನಮಾನ, ಜಾತಿ, ಲಿಂಗ, ಪ್ರಾದೇಶಿಕ ಭಾಷೆ, ದೇಹ ರಚನೆ ಅಥವಾ ಅಂಗವಿಕಲತೆ ಅಥವಾ ಯಾವುದೇ ಇತರೆ ಅಂಶಗಳ ಆಧಾರದ ಮೇಲೆ ವಿದ್ಯಾರ್ಥಿಗಳ ವಿರುದ್ಧದ ಬೇಧಭಾವ / ಪೂರ್ವಾಗ್ರಹಪೀಡಿತ ಕಲ್ಪನೆಯನ್ನು ಸಹಿಸತಕ್ಕದ್ದಲ್ಲ. | | |
| 3 | ಶಾಲೆಯು ಈ ವಿಷಯದಲ್ಲಿ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೆ ಸೂಕ್ತವಾದ ತರಬೇತಿಯನ್ನು ಪಡೆದಿರುವ ಸಿಬ್ಬಂದಿಯನ್ನು ಮಕ್ಕಳ ರಕ್ಷಣಾ ಅಧಿಕಾರಿಯನ್ನಾಗಿ ಗೊತ್ತುಪಡಿಸುವುದು ಮತ್ತು ಸೂಕ್ಷ್ಮ ಸಂವೇದನಾಶೀಲರಾಗಿರುವುದು. | | ಎಮ್ |
| 4 | (i) ಶೈಕ್ಷಣಿಕ ಸಂಸ್ಥೆಗಳಿಗಾಗಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಸದಸ್ಯರನ್ನೊಳಗೊಂಡಂಥ ಶಾಲೆಯ ಮಕ್ಕಳ ರಕ್ಷಣಾ ಸಮಿತಿ ಇರುವುದು. | | ಎಮ್ |
| | (ii) ಶಾಲಾ ಮಕ್ಕಳ ರಕ್ಷಣಾ ಸಮಿತಿಯ ಎಲ್ಲಾ ಸದಸ್ಯರು, ಶಾಲಾ ಮಕ್ಕಳ ರಕ್ಷಣಾ ನೀತಿಯಲ್ಲಿ ತಮ್ಮ ಪಾತ್ರಗಳು ಮತ್ತು ಜವಾಬ್ದಾರಿಗಳು, ವರದಿ ಮಾಡುವಿಕೆ ಹಾಗೂ ಪರಿಹಾರ ಕಾರ್ಯವಿಧಾನಗಳ ಮೇಲೆ ಆಧಾರಿತರಾಗಿರುವರು. | | |
| | (iii) ಅಸ್ತಿತ್ವದಲ್ಲಿರುವ ಕಾನೂನಿಗನುಸಾರವಾಗಿ ಮಕ್ಕಳ ಸುರಕ್ಷತೆಯ ಉಲ್ಲಂಘನೆ ಅಥವಾ ದುರುಪಯೋಗ ಪ್ರಕರಣಗಳಿಗೆ ಸದಸ್ಯರು ನಿರಂತರವಾಗಿ ನಡೆದ ಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಮತ್ತು ಸೂಕ್ಷ್ಮವಾಗಿ ಪ್ರತಿಕ್ರಿಯಿಸುವುದು. | | |
| | (iv) ಮಕ್ಕಳ ರಕ್ಷಣಾ ಸಮಿತಿಯಲ್ಲಿ ನೊಂದಾಯಿಸಲಾದ ಪ್ರಕರಣಗಳ ಮಾಸಿಕ ವರದಿಯನ್ನು ಶಾಲೆಯು ಸಿದ್ಧಪಡಿಸುವುದು ಮತ್ತು ಆದರಡಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುವುದು. | | |
| | (v) ಪ್ರಕರಣಗಳ ಸಂಖ್ಯೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ಬಾಹ್ಯ ಸಮಿತಿಗಳು / ಸಂಸ್ಥೆಗಳಿಗೆ ಶಾಲೆಯು ಸಲ್ಲಿಸಿದ ಎಲ್ಲಾ ವರದಿಗಳಲ್ಲಿ ಪ್ರಾಶಸ್ತ್ಯ ನೀಡುವುದು. | | |

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 5 | (i) ಎಲ್ಲಾ ಬೋಧಕ, ಬೋಧಕೇತರ ಗುತ್ತಿಗೆ ಮತ್ತು ಇತರೆ ಸಿಬ್ಬಂದಿಗಳು ಮಕ್ಕಳ ರಕ್ಷಣಾ ನೀತಿ ಹಾಗೂ ಮಾರ್ಗದರ್ಶನಗಳು ಮತ್ತು ಮಕ್ಕಳಿಗೆ ಸಂಬಂಧಿಸಿದ ಶಾಸನದ ಮೇಲೆ ಸೂಕ್ಷ್ಮಗ್ರಾಹಿಯಾಗಿರುವುದು. | | ಎಮ್ |
| | (ii) ಶಾಲೆಯು, ಅದರ ಎಲ್ಲಾ ಪೂರೈಕೆದಾರರು / ಹೊರಗುತ್ತಿಗೆ ಏಜೆನ್ಸಿಗಳಿಗೆ ಸೇವೆಯನ್ನು ಶಾಲಾ ಮಕ್ಕಳ ರಕ್ಷಣಾ ಕಾರ್ಯನೀತಿಯನ್ನು ಒದಗಿಸಿ, ಅವರಿಂದ ಶಾಲೆಯಲ್ಲಿ/ ವಿದ್ಯಾರ್ಥಿಗಳೊಂದಿಗೆ ಕಾರ್ಯನಿರ್ವಹಿಸಲು ನಿಯೋಜಿಸಿದ ಅವರ ಎಲ್ಲ ಕೆಲಸಗಾರರು ಶಾಲಾ ಮಕ್ಕಳ ರಕ್ಷಣಾ ಕಾರ್ಯನೀತಿಗೆ ಅನುಗುಣವಾಗಿ ಮತ್ತು ಅದಕ್ಕೆ ಬದ್ಧರಾಗಿ ಕಾರ್ಯನಿರ್ವಹಿಸಬೇಕೆಂದು ಲಿಖಿತದಲ್ಲಿ ಒಪ್ಪಿಗೆ ಪತ್ರವನ್ನು ತೆಗೆದುಕೊಳ್ಳುವುದು. | | |
| 6 | (i) ಎಲ್ಲಾ ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಶಾಲಾ ಮಕ್ಕಳ ರಕ್ಷಣಾ ನೀತಿ / ಮಾರ್ಗದರ್ಶನಗಳು ಮತ್ತು ವರದಿ ಮಾಡುವ ಕಾರ್ಯವಿಧಾನಗಳ ಬಗ್ಗೆ ಅರಿವನ್ನು ಮೂಡಿಸುವುದು.<br>(ii) ಶಾಲಾ ಮಕ್ಕಳ ಸಂರಕ್ಷಣಾ ಕಾರ್ಯನೀತಿಯ, ಪ್ರಮುಖ ಲಕ್ಷಣಗಳನ್ನು ಅಥವಾ ಮುಖ್ಯಾಂಶಗಳನ್ನು ಪೋಷಕರು, ಮಕ್ಕಳು ಮತ್ತು ಸಂದರ್ಶಕರ ಗಮನಕ್ಕೆ ಬೇಗ ಬರುವಂತಹ ಶಾಲೆಯ ಆವರಣಗಳಲ್ಲಿ ಎದ್ದು ಕಾಣುವಂತೆ ಪ್ರದರ್ಶಿಸುವುದು. | | ಎಮ್ |
| 7 | ಬೋಧಕ, ಬೋಧಕೇತರ, ಗುತ್ತಿಗೆ, ಸ್ವಯಂ ಸೇವಕರು ಮತ್ತು ಇತರೆ ಸಿಬ್ಬಂದಿಗಳಿಗೆ ಮಕ್ಕಳೊಂದಿಗೆ ಕೆಲಸ ಮಾಡಲು ಅನುಮತಿ ನೀಡುವುದಕ್ಕಿಂತ ಮೊದಲು ನೇಮಕಾತಿ ಮತ್ತು ಪರಿಶೀಲನಾ ಪ್ರಕ್ರಿಯೆ ನಡೆಸುವುದು. | | ಎಮ್ |
| 8 | ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ದುರ್ಬಲತೆ ಮತ್ತು ಮಕ್ಕಳು ಮತ್ತು ಅವರ ಹಕ್ಕುಗಳ ಬಗೆಗಿರುವ ಸಂವೇದನಾಶೀಲತೆ, ಅವರು ಎದುರಿಸುತ್ತಿರುವ ಸಮಸ್ಯೆಗಳು ಇತ್ಯಾದಿಗಳ ಬಗ್ಗೆ ನೌಕರರು ಹೊಂದಿರುವ ಮನೋಭಾವನೆಯ ಬಗ್ಗೆ ಮತ್ತು ಶಾಲೆಯ ನೇಮಕಾತಿ ಪ್ರಕ್ರಿಯೆ ಸಮಯದಲ್ಲಿ ಅವರನ್ನು ಮೌಲ್ಯಮಾಪನ ಮಾಡುವ ವ್ಯವಸ್ಥೆ ಇರಬೇಕು. | | ಆರ್ |
| 9 | (i) ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗಾಗಿ ಶಾಲಾ ಮಕ್ಕಳ ರಕ್ಷಣಾ ನೀತಿಯ ಅನುಸಾರವಾಗಿ ನೀತಿ ಸಂಹಿತೆ (ನಡವಳಿಕೆ ಮಾರ್ಗದರ್ಶನಗಳು) ಇರುವುದು. | | ಎಮ್ |
| | (ii) ನೀತಿ ಸಂಹಿತೆಗೆ ಸಂಬಂಧಿಸಿದ ಎಲ್ಲರಿಗಾಗಿ ಪುನರ್ ಮನನ ಕಾರ್ಯಕ್ರಮವನ್ನು ಆಯೋಜಿಸುವುದು. | | |
| 10 | (i) ಶಾಲಾ ಮೇಲ್ವಿಚಾರಣಾ ಸಮಿತಿ ಅಥವಾ ಪೋಷಕರು ಶಿಕ್ಷಕರ ಸಂಘವು ಸಂಬಂಧಿಸಿದ ಸ್ಥಳದಲ್ಲಿ ನಿಯಮಿತವಾಗಿ ಸಭೆ ಸೇರುವುದು.<br>(ii) ಸಭೆಯ ಕಾರ್ಯಸೂಚಿಯು ಮಕ್ಕಳ ಸಂರಕ್ಷಣೆ ಮತ್ತು ಸುರಕ್ಷತೆಯ ವಿಷಯಗಳನ್ನೊಳಗೊಂಡಿರುವುದು.<br>(iii) ಮಕ್ಕಳ ರಕ್ಷಣಾ ವಿಷಯಗಳಲ್ಲಿ ಕುಟುಂಬವು ಭಾಗವಹಿಸುವಿಕೆಯನ್ನು ಶಾಲೆಯು ಸಕ್ರಿಯವಾಗಿ ಸಮಾಲೋಚಿಸುವುದು ಮತ್ತು ಪ್ರೋತ್ಸಾಹಿಸುವುದು.<br>(iv) ದುರುಪಯೋಗದ ಪ್ರಕರಣಗಳು ಅಥವಾ ಸುರಕ್ಷತೆಯ ಉಲ್ಲಂಘನೆಯ ಬಗ್ಗೆ ಸಮಿತಿಗೆ ವರದಿ ನೀಡುವುದು. | | ಎಮ್ |
| 11 | (i) ಶಾಲಾ ಪ್ರಾಧಿಕಾರವು ಎಸ್‌ಜೆಸಿಯು ಮಕ್ಕಳ ಸಹಾಯವಾಣಿ, ಸಿ.ಡಬ್ಲ್ಯೂ.ಸಿ, ಕೆ.ಎಸ್.ಸಿ.ಪಿ.ಸಿ.ಆರ್, ಡಿ.ಸಿ.ಪಿಯುಗಳಂಥ ಮಕ್ಕಳ ರಕ್ಷಣಾ ಕಾರ್ಯವಿಧಾನಗಳ ಬಗ್ಗೆ ಅರಿವು ಮೂಡಿಸುವುದು<br>(ii) ಶಾಲೆಯು ಮಕ್ಕಳ ಸಹಾಯವಾಣಿ (1098), ಅಧಿಕಾರ ವ್ಯಾಪ್ತಿಯ ಪೊಲೀಸ್ ಠಾಣೆ, ಮಕ್ಕಳ ಕಲ್ಯಾಣ ಅಧಿಕಾರಿ, ಎಸ್.ಜೆ.ಪಿ.ಯು. ಪೊಲೀಸ್ ನಿಯಂತ್ರಣ ಕೊಠಡಿ, ಶಾಲೆಯು ಗೊತ್ತುಪಡಿಸಿದ ಮಕ್ಕಳ ಸುರಕ್ಷಣಾಧಿಕಾರಿಯವರ ಸಂಪರ್ಕದ ದೂರವಾಣಿ ಸಂಖ್ಯೆಗಳನ್ನು ಪ್ರತ್ಯೇಕ ಮಕ್ಕಳ ಸುರಕ್ಷಣಾ ಸೂಚನಾ ಫಲಕದಲ್ಲಿ ಎದ್ದು ಕಾಣುವಂತೆ ಪ್ರದರ್ಶಿಸುವುದು. | | ಎಮ್ |
| 12 | (i) ಶಾಲೆಯು ಅರೆಕಾಲಿಕವಾಗಿ ಅಥವಾ ಪೂರ್ಣ ಕಾಲಿಕವಾಗಿ ಅರ್ಹವಿರುವ ಸಲಹೆಗಾರ ಅಥವಾ ಮನೋಶಾಸ್ತ್ರಜ್ಞನನ್ನು ನೇಮಕ ಮಾಡಿಕೊಳ್ಳುವುದು ಅಥವಾ ಅಗತ್ಯ ಅಥವಾ ತುರ್ತು ಇದ್ದಾಗ ಸಮಾಲೋಚಕರನ್ನು ಕರೆಯಿಸಿಕೊಳ್ಳುವುದು.<br>(ii) ಅಗತ್ಯ ಸಮಾಲೋಚನಾ ಸೇವೆಗಳನ್ನು ಒದಗಿಸಲು ಒಬ್ಬ ಹಿರಿಯ ಶಿಕ್ಷಕರನ್ನು ನಿಯೋಜಿಸುವುದು ಮತ್ತು ಅಗತ್ಯವಿದ್ದಾಗ ವೈದ್ಯನ ಬಳಿ ಹೋಗುವುದಕ್ಕೆ ಶಿಫಾರಸ್ಸು ಮಾಡಲು ಸಮರ್ಥನಾಗಿರುತ್ತಾನೆ. | | ಎಮ್ |

| ಕ್ರ. ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 13 | (i) ಶಾಲೆಯು, ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು ಮಕ್ಕಳ ಚರ್ಚಾ ವೇದಿಕೆ/ಸಂಘ / ಕ್ಲಬ್‌ಗಳನ್ನು ಹೊಂದಿರುವುದು ಮತ್ತು ಸುರಕ್ಷತೆ, ಸಂರಕ್ಷಣೆ ಮತ್ತು ಇತರೆ ಸಂಬಂಧಿತ ವಿಷಯಗಳ ಮೇಲೆ ಶಿಕ್ಷಕರು ಮತ್ತು ಪ್ರಾಧಿಕಾರದೊಂದಿಗೆ ಚರ್ಚಿಸಲು ಹಾಗೂ ಹಂಚಿಕೊಳ್ಳುವುದಕ್ಕಾಗಿ ಅವರಿಗಾಗಿ ವೇದಿಕೆಯನ್ನು ಒದಗಿಸುವುದು.<br>(ii) ವೇದಿಕೆಯು, ಎಲ್ಲಾ ಅನುಭವಗಳಿಂದ ಯೋಗ್ಯ ಪ್ರಾತಿನಿಧ್ಯದೊಂದಿಗೆ ಅಂತರ್ಗತವಾಗಿರುವುದು. | | ಎಮ್ |
| 14 | ಮಕ್ಕಳ ಸುರಕ್ಷತೆಯ ಭಿತ್ತಿಪತ್ರಗಳನ್ನು ಶಾಲೆಯ ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸುವುದು. | | ಎಮ್ |
| 15 | (i) ಮಕ್ಕಳ ಸಂರಕ್ಷಣೆ ಮತ್ತು ಸುರಕ್ಷತೆಯ ಬಗ್ಗೆ ಕಾಳಜಿ ಅಥವಾ ವಿಷಯವನ್ನು ಎತ್ತುವುದಕ್ಕೆ ಮಕ್ಕಳ ಮತ್ತು ಪೋಷಕರಿಗೆ ಸ್ಥಳವನ್ನು ಒದಗಿಸುವುದಕ್ಕೆ ಸಲಹೆ/ದೂರು ಪೆಟ್ಟಿಗೆಯನ್ನು ಆ ಸ್ಥಳದಲ್ಲಿಡುವುದು.<br>(ii) ಶಾಲಾ ಮಕ್ಕಳ ರಕ್ಷಣಾ ನೀತಿಯಲ್ಲಿ ನಿರ್ದಿಷ್ಟಪಡಿಸಲಾದ ಮಾನದಂಡಗಳ ಪ್ರಕಾರ ಮಕ್ಕಳ ರಕ್ಷಣಾ ಸಮಿತಿಯಿಂದ ಪೆಟ್ಟಿಗೆಯನ್ನು ಇಡುವುದು ಮತ್ತು ಪುನರವಲೋಕಿಸುವುದು.<br>ಶಾಲೆಯು ದೂರು ನೀಡಿರುವ ಯಾರೇ ಅಥವಾ ಸಲಹೆ ನೀಡಲು ಬರುವ ಮಕ್ಕಳನ್ನು ಪ್ರತ್ಯೇಕಿಸಲಾಗಿಲ್ಲ ಅಥವಾ ಕಿರುಕುಳಕ್ಕೊಳಗಾಗಿಲ್ಲ ಮತ್ತು ಬಲಿಪಶುಗಳಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು.<br>(iii) ಶಾಲೆಯು ಎಸ್.ಡಿ.ಎಂ.ಸಿ ಅಥವಾ ಮಕ್ಕಳ ಸಂರಕ್ಷಣಾ ಸಮಿತಿಗೆ ಮಕ್ಕಳಿಂದ ತರಲಾದ ದೂರುಗಳ ದಾಖಲೆಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು ಮತ್ತು ಈ ದಾಖಲೆಗಳು ಪರಿಶೀಲನೆಗಾಗಿ ಲಭ್ಯವಿರಬೇಕು. | | ಎಮ್ |
| 16 | ಸುರಕ್ಷತೆಯ ನಿಯಮಗಳು ಮತ್ತು ಸಂರಕ್ಷಣಾ ಮಾನದಂಡಗಳನ್ನು ಶಾಲೆ ಹೇಗೆ ಪಾಲಿಸಿದೆ ಎಂಬುದನ್ನು ಮೌಲ್ಯಮಾಪನ ಮಾಡುವುದಕ್ಕಾಗಿ ಮಕ್ಕಳ ಸುರಕ್ಷತೆಯ ಪರಿಶೀಲನಾ ಪಟ್ಟಿಯನ್ನು ನಿಯತಕಾಲಿಕವಾಗಿ ಬಳಸುವುದು. | | ಎಮ್ |
| 17 | ಮಕ್ಕಳ ಸುರಕ್ಷತೆಯ ತಪಶೀಲು ಪಟ್ಟಿಯನ್ನು ಯೋಜನೆ ಮತ್ತು ಹೊಸ ಸೌಲಭ್ಯಗಳ ಉದ್ದೇಶದ ಬಗ್ಗೆ ಅಥವಾ ಅಸ್ತಿತ್ವದಲ್ಲಿರುವ ವಸ್ತುಗಳನ್ನು ಮೌಲ್ಯಮಾಪನ ಮಾಡುವುದಕ್ಕಾಗಿ ಬಳಸಿಕೊಳ್ಳಲಾಗುವುದು. | | ಎಮ್ |

### ಭಾಗ –IV ವೈಯಕ್ತಿಕ, ಲೈಂಗಿಕ, ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆಗಾಗಿ ಪ್ರಕ್ರಿಯೆಗಳು ಮತ್ತು ಶಿಷ್ಟಾಚಾರಗಳು

### ಭಾಗ –IV ಬಿ : ದುರುಪಯೋಗ ಅಥವಾ ಸುರಕ್ಷತೆಯ ಉಲ್ಲಂಘನೆಯನ್ನು ವರದಿ ಮಾಡುವುದಕ್ಕಾಗಿ ಪ್ರಕ್ರಿಯೆಗಳು

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 1 | (i) ಬೋಧಕ ಅಥವಾ ಬೋಧಕೇತರ ಸಿಬ್ಬಂದಿ ಅಥವಾ ಶಾಲೆಯೊಂದಿಗೆ ಸಂಪರ್ಕ ಹೊಂದಿದ ಯಾರೇ ವ್ಯಕ್ತಿ ಮಕ್ಕಳ ದುರುಪಯೋಗ ಅಥವಾ ಸುರಕ್ಷತೆಯ ಉಲ್ಲಂಘನೆಯ ಸಂದರ್ಭದಲ್ಲಿ ಶಿಕ್ಷಕರು ಮತ್ತು ಇತರೆ ಸದಸ್ಯರುಗಳು ಸಿಬ್ಬಂದಿ ಮತ್ತು ಆಡಳಿತ ಮಂಡಳಿಗೆ ವರದಿಯನ್ನು ಮಾಡುವಾಗ ಸ್ಪಷ್ಟವಾದ ಪ್ರಕ್ರಿಯೆಗಳನ್ನು ಮತ್ತು ಮಾದರಿಯನ್ನು ಅನುಸರಿಸುವುದು. | | ಎಮ್ |
| | (ii) ಸಿಪಿಸಿ/ಮಕ್ಕಳ ಸಂರಕ್ಷಣಾ ಸಮಿತಿಯ ಸದಸ್ಯರುಗಳು, ಮುಖ್ಯೋಪಾಧ್ಯಾಯರು/ ಮುಖ್ಯಸ್ಥರುಗಳಂತಹ ಸಂಬಂಧಪಟ್ಟವರೆಲ್ಲರೂ ಈ ಪ್ರಕ್ರಿಯೆಗಳ ಮೇಲೆ ಆಧಾರಿತವಾಗಿರುವುದು. | | |
| 2 | (i) ಮಕ್ಕಳ ದುರುಪಯೋಗ ಅಥವಾ ಸುರಕ್ಷತೆಯ ಉಲ್ಲಂಘನೆಯ ಸಂದರ್ಭದಲ್ಲಿ ಬದ್ಧವಾಗಿರುವುದು ಮತ್ತು ಶಾಲಾ ಪ್ರಾಧಿಕಾರವು ವರದಿ ಮಾಡುವುದಕ್ಕಾಗಿ ಹಾಗೂ ವಿಚಾರಣೆಗೆ ಮಗುವಿನ ಸೂಕ್ಷ್ಮತೆಯ ಬಗೆಗಿನ ಪ್ರಕ್ರಿಯೆಯನ್ನು ಅನುಸರಿಸುವುದು ಮತ್ತು ಅಗತ್ಯವಿರುವಲ್ಲೆಲ್ಲಾ ಕಾನೂನಿನ ಪ್ರಕಾರ ಅನುಸರಿಸುವುದು. | | ಎಮ್ |
| | (ii) ವರದಿ ಮಾಡುವ ಮತ್ತು ವಿಚಾರಣೆ ಮಾಡುವ ಪ್ರಕ್ರಿಯೆ ಮತ್ತು ಪ್ರಕರಣದ ಗೋಪ್ಯತೆಯನ್ನು ಎತ್ತಿಹಿಡಿಯುವ ಪ್ರತಿಯೊಂದು ಹಂತದ ಅವಧಿಯಲ್ಲಿ ಮಗುವನ್ನು ಸುನಿಶ್ಚಿತಗೊಳಿಸುವುದಕ್ಕೆ ತೆಗೆದುಕೊಂಡ ಎಲ್ಲಾ ಕ್ರಮಗಳು ಮತ್ತಷ್ಟು ಆಘಾತವನ್ನುಂಟುಮಾಡತಕ್ಕದ್ದಲ್ಲ. | | |
| 3 | ಲೈಂಗಿಕ ಅಪರಾಧಗಳು ಅಥವಾ ಘಟನೆಗಳು ವರದಿಯಾದ ಸಂದರ್ಭದಲ್ಲಿ, ಆಪಾದಿತ ಅಪರಾಧಿಯ ಸಂಪರ್ಕದಿಂದ ಮಗುವನ್ನು ದೂರವಿಡಲು ಕೂಡಲೇ ಕ್ರಮಕೈಗೊಳ್ಳುವುದು. | | ಎಮ್ |
| 4 | ಮಕ್ಕಳ ಸಂರಕ್ಷಣಾ ಸಮಿತಿಯು ದುರುಪಯೋಗ / ಉಲ್ಲಂಘನೆಯನ್ನು ಮತ್ತು ಸದಸ್ಯರುಗಳು ಸಕ್ರಿಯವಾಗಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆಂದು ತಿಳಿಸುವುದು | | ಎಮ್ |

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 5 | ಸಿ.ಪಿ.ಓ/ಮುಖ್ಯಸ್ಥರು ಎಲ್ಲಾ ಪ್ರಕ್ರಿಯೆಗಳನ್ನು ಅನುಸರಿಸುವುದು ಮತ್ತು ಅಗತ್ಯಪಡಿಸಲಾದಂತೆ ಪೋಲೀಸ್/ಎಸ್.ಜೆ.ಪಿ.ಯು/ಸಿ.ಡಬ್ಲ್ಯೂಸಿ.ಗೆ ತಿಳಿಸುವುದು. | | ಎಮ್ |
| 6 | (i) ಶಾಲೆಯಲ್ಲಿ ಅಥವಾ ಶಾಲೆಗೆ ಸಂಬಂಧಿಸಿರುವಲ್ಲಿನ ಸಂಭವಿಸಿದ ಯಾವುದೇ ಲೈಂಗಿಕ ಅಪರಾಧದ ಸಂದರ್ಭದಲ್ಲಿ, ಶಾಲಾ ಪ್ರಾಧಿಕಾರವು ಬಾಧಿತ ಮಗು / ಮಕ್ಕಳು ಮತ್ತು ಕುಟುಂಬಕ್ಕೆ ಅವರ ಚಿಕಿತ್ಸೆಯಲ್ಲಿ ಪುನರ್‌ವಸತಿಗಾಗಿ ನೆರವು ಮತ್ತು ಬೆಂಬಲವನ್ನು ಕಲ್ಪಿಸುವುದು. ಇದು ಮಗು ಮತ್ತು ಕುಟುಂಬವನ್ನು ಗೌರವ ಮತ್ತು ಸೂಕ್ಷ್ಮತೆಯಿಂದ ನೋಡಿಕೊಳ್ಳಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.ಶಿಕ್ಷಕರು, ಸಿಬ್ಬಂದಿ ಮತ್ತು ಇತರೆ ವಿದ್ಯಾರ್ಥಿಗಳು ಸಂತ್ರಸ್ಥ ಮಗುವನ್ನು ಮಾನಸಿಕವಾಗಿ ಶಕ್ಯಗೊಳಿಸಲು ಮತ್ತು ಶಾಲೆಯಲ್ಲಿ ಅಧ್ಯಯನವನ್ನು ಮುಂದುವರೆಸುವುದಕ್ಕೆ ಅನುಕೂಲಕರವಾದ ವಾತಾವರಣವನ್ನು ಸೂಕ್ಷ್ಮವಾಗಿ ಸೃಷ್ಟಿಸುವುದು. | | ಎಮ್ |
| | (ii) ಶಾಲಾ ಪ್ರಾಧಿಕಾರವು ಸಹ, ಶಾಲೆಯ ಹೊರಗೆ ದುರುಪಯೋಗ ಸಂಭವಿಸಿದ ಸಂದರ್ಭದಲ್ಲಿ, ಆದರೆ ಶಾಲೆಯು ಬೆಂಬಲವನ್ನು ಕೋರಿದಾಗ ಅದೇ ರೀತಿಯ ಬೆಂಬಲವನ್ನು ವಿಸ್ತರಿಸುತ್ತದೆ. | | ಆರ್ |
| | (iii) ಕಾನೂನು ಅಗತ್ಯತೆಗಳನ್ನು ಎದುರಿಸುವುದಕ್ಕೆ ಸಕ್ಷಮ ಪ್ರಾಧಿಕಾರಗಳೊಂದಿಗೆ ಸಹಕಾರವನ್ನು ಸಹ ನೀಡುವುದು | | ಎಂ |
| 7 | ಅದು ವಿಚಾರಣಾರ್ಹ ಅಪರಾಧವಾಗದೆ. ದುರುಪಯೋಗ ಅಥವಾ ಉಲ್ಲಂಘನೆಯ ಸಂದರ್ಭದಲ್ಲಿ, ಶಾಲಾ ಮಕ್ಕಳ ರಕ್ಷಣಾ ನೀತಿಯಲ್ಲಿ ಉಪಬಂಧಿಸಲಾದಂತೆ ಅಥವಾ ರಾಜ್ಯವು ನಿರ್ದಿಷ್ಟಪಡಿಸಲಾದಂತೆ ದಂಡ ವಿಧಿಸುವ ಶಿಕ್ಷೆಯ ಕ್ರಮವನ್ನು ಒಳಗೊಂಡಂತೆ ಮತ್ತು ಪರಿಹಾರ ಕ್ರಮಗಳನ್ನು ಮಕ್ಕಳ ಸಂರಕ್ಷಣಾ ಸಮಿತಿ ಮತ್ತು ಶಾಲಾ ಪ್ರಾಧಿಕಾರವು ನಿರ್ಧರಿಸುವುದು. | | ಎಮ್ |
| 8 | ಲೈಂಗಿಕ ಅಪರಾಧ ಪ್ರಕರಣದಲ್ಲಿ, ಪ್ರಕ್ರಿಯೆಯ ಅನುಸಾರವಾಗಿ, ಆಪಾದಿತನ ಸೇವೆಗಳನ್ನು ಕೊನೆಗೊಳಿಸಿ ತಪ್ಪಿತಸ್ಥನೆಂದು ಕಂಡು ಬಂದಲ್ಲಿ ನ್ಯಾಯಾಲಯದಿಂದ ವಿಚಾರಣೆಯು ಪೂರ್ಣಗೊಳ್ಳುವವರೆಗೂ ಅಮಾನತ್ತಿನಲ್ಲಿಡತಕ್ಕದ್ದು. | | ಎಮ್ |
| 9 | ಬೋಧಕ ಅಥವಾ ಬೋಧಕೇತರ ಸಿಬ್ಬಂದಿ ಅಥವಾ ಶಾಲೆಗೆ ಸಂಬಂಧಿಸಿದ ಯಾರೇ ವ್ಯಕ್ತಿಯಿಂದ ದುರುಪಯೋಗದ ಸಂದರ್ಭದಲ್ಲಿ, ಶಾಲೆಯು ಇತರೆ ಮಕ್ಕಳಿಗೆ ಸಲಹೆ ನೀಡುವ ಪ್ರಕ್ರಿಯೆಯಿರುವುದು. | | ಎಮ್ |
| 10 | ಶಾಲೆಯು, ಎಚ್ಚರಿಕೆ ಮತ್ತು ಸೂಕ್ಷ್ಮತೆಯಿಂದ ಮಾಧ್ಯಮದವರಿಗೆ ವಿಷಯವನ್ನು ತಿಳಿಸುವುದು, ಭಾವೋದ್ರೇಕವನ್ನು ತಪ್ಪಿಸುವುದು ಮತ್ತು ಮಕ್ಕಳ ಮತ್ತು ಕುಟುಂಬದ ಖಾಸಗಿತನ ಮತ್ತು ಗೌಪ್ಯತೆಯ ಹಕ್ಕನ್ನು ಎತ್ತಿ ಹಿಡಿಯುವುದು. | | ಎಮ್ |
| 11 | ಶೈಕ್ಷಣಿಕ ಸಂಸ್ಥೆಗಳಿಗಾಗಿ ಕರ್ನಾಟಕ ರಾಜ್ಯ ಮಕ್ಕಳ ಸಂರಕ್ಷಣಾ ಸಮಿತಿಯಿಂದ ಒದಗಿಸಲಾದಂತೆ ಎಲ್ಲಾ ಪ್ರಕ್ರಿಯೆಗಳನ್ನು ಅನುಸರಿಸಲಾಗುವುದು. | | ಎಮ್ |

**ಭಾಗ –IV ವೈಯಕ್ತಿಕ, ಲೈಂಗಿಕ ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆಗಾಗಿನ ಪ್ರಕ್ರಿಯೆಗಳು ಮತ್ತು ಶಿಷ್ಟಾಚಾರಗಳು**

**ಭಾಗ –IV ಸಿ : ಇತರೆ ಮಕ್ಕಳ ಸುರಕ್ಷತೆ ಮತ್ತು ಸಂರಕ್ಷಣೆಯ ಕ್ರಮಗಳು**

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ಶಿಫಾರಸ್ಸು ಮಾಡಿದ |
|---|---|---|---|
| 1 | (i) ಶಾಲಾ ಆವರಣವನ್ನು ಮತ್ತು ಕೊಠಡಿಗಳನ್ನು ನಿರ್ಮಾಣ ವಸ್ತುಗಳು ಅಥವಾ ಇತರೆ ಸಾಮಗ್ರಿಗಳನ್ನು ಸಂಗ್ರಹಿಸಿಡಲು ಬಳಸದೇ ಮತ್ತು ಶಿಕ್ಷಣ ಮತ್ತು ಅದಕ್ಕೆ ಸಂಬಂಧಪಟ್ಟ ಇತರೆ ಚಟುವಟಿಕೆಗಳಿಗೆ ಮಾತ್ರ ಬಳಸುವುದು | | ಆರ್ |
| | (ii) ಶಾಲೆಯ ಆವರಣದೊಳಗೆ ಜೂಜಾಟ, ಮದ್ಯಪಾನಗಳಂತಹ ಎಲ್ಲಾ ರೀತಿಯ ಸಮಾಜ ವಿರೋಧಿ ಚಟುವಟಿಕೆಗಳನ್ನು ಶಾಲೆಯು ನಿಷೇಧಿಸುವುದು ಹಾಗೂ ಪೋಲೀಸರಿಗೆ ಶಾಲೆಯ ಬಳಿ ಅಥವಾ ಶಾಲೆಯ ಆವರಣದೊಳಗೆ ನಡೆದ ಯಾವುದೇ ಸಮಾಜ ವಿರೋಧಿ ಚಟುವಟಿಕೆ ಬಗ್ಗೆ ವರದಿ ಮಾಡುವುದು | | ಎಮ್ |
| 2 | ಸಿಬ್ಬಂದಿಯು, ಮಕ್ಕಳನ್ನು ತರಗತಿಯ ಒಳಗೂ ಮತ್ತು ಹೊರಗೂ ಎರಡೂ ಕಡೆಗಳಲ್ಲಿ ಸಕ್ರಿಯವಾಗಿ ಮೇಲ್ವಿಚಾರಣೆ ಮಾಡುವುದು | | ಎಮ್ |

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ಶಿಫಾರಸ್ಸು ಮಾಡಿದ |
|---|---|---|---|
| 3 | ಪ್ರತ್ಯೇಕವಾಗಿರಿಸಿದ ಸ್ಥಳ, ಹೊರದಾರಿ (ಕಾರಿಡಾರ್) ಗಳು ಮತ್ತು ಮೆಟ್ಟಿಲು ಸಾಲುಗಳನ್ನು ವಿರಾಮ ಕಾಲದ ಅವಧಿಯಲ್ಲಿ ಮತ್ತು ಸಭೆ ಸೇರುವಾಗ ಹಾಗೂ ಚದುರುವಿಕೆಯ ಸಮಯದಲ್ಲಿ ಸಿಬ್ಬಂದಿ ಸದಸ್ಯರಿಂದ ವೀಕ್ಷಿಸುವುದು. | | ಎಮ್ |
| 4 | ಎಲ್ಲಾ ತರಗತಿ ಕೊಠಡಿಗಳು, ಪ್ರಯೋಗಾಲಯಗಳು, ಶೌಚಾಲಯಗಳು, ಗ್ರಂಥಾಲಯ, ಸಿಬ್ಬಂದಿ ಕೊಠಡಿ, ಅಡುಗೆಕೋಣೆ, ಕ್ರೀಡಾ ಕೊಠಡಿ, ಸಭಾಂಗಣ ಮತ್ತು ಇತರೆ ಸ್ಥಳಗಳನ್ನು ಅವುಗಳಿಗೆ ಆ ದಿನದಂದು ಬೀಗ ಹಾಕುವುದಕ್ಕಿಂತ ಮೊದಲು ಶಾಲಾ ಸಿಬ್ಬಂದಿಯವರಿಂದ ಪ್ರತಿದಿನ ತಪಾಸಣೆ ಮಾಡುವುದು. | | ಎಮ್ |
| 5 | ಭದ್ರತಾ ಸಿಬ್ಬಂದಿ/ ಆಡಳಿತ ಸಿಬ್ಬಂದಿ ವರ್ಗದವರಿಂದ ಹೊರಗಿನವರು/ ಭೇಟಿ ನೀಡುವವರಿಂದ ಶಾಲಾ ಕಟ್ಟಡದ ಪ್ರವೇಶವನ್ನು ನಿಯಂತ್ರಣದಲ್ಲಿರಿಸುವುದು ಮತ್ತು ಮೇಲ್ವಿಚಾರಣೆಯಲ್ಲಿರಿಸುವುದು ಹಾಗೂ ಸಂದರ್ಶಕರ ನೋಂದಣಿ ಪುಸ್ತಕವನ್ನು ಕಡ್ಡಾಯವಾಗಿ ಮತ್ತು ಶ್ರದ್ಧೆಯಿಂದ ನಿರ್ವಹಿಸುವುದು | | ಎಮ್ |
| 6 | ಶಾಲೆಯು ಕೌಟುಂಬಿಕ ತುರ್ತುಸ್ಥಿತಿ ಅಥವಾ ಇತರೆ ಅನಿರೀಕ್ಷಿತ ಬಂದ್‌ಗಳಂತಹ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ತಂದೆ–ತಾಯಿ / ಪೋಷಕರಿಂದ ಅಧಿಕಾರ ಪತ್ರವನ್ನು ನೀಡದ ಹೊರತು ಯಾವುದೇ ಮಗುವನ್ನು ಕರೆದುಕೊಂಡು ಹೋಗಲು ಬರುವ ವ್ಯಕ್ತಿಗೆ ತಂದೆ–ತಾಯಿ / ಪೋಷಕರ ಹೊರತಾಗಿ ಶಾಲೆಯನ್ನು ಬಿಡಲು ಅನುಮತಿಸುವುದಿಲ್ಲ ಎಂಬುದನ್ನು ಶಾಲೆಯು ಖಚಿತಪಡಿಸಿಕೊಳ್ಳುವುದು.<br>ಈ ಮಾಹಿತಿಯನ್ನು ತಂದೆ–ತಾಯಿ / ಪೋಷಕರಿಗೆ ಒದಗಿಸುವುದು. | | ಎಮ್ |
| 7 | (i) ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯ ತಂದೆ–ತಾಯಿ / ಪೋಷಕರ ಸಂಪರ್ಕಗಳು, ವಿಳಾಸದ ಬದಲಾವಣೆ ಮತ್ತು ತುರ್ತು ಸಂದರ್ಭದಲ್ಲಿ ಸಂಪರ್ಕದ ದೂರವಾಣಿ ಸಂಖ್ಯೆಗಳ ಪರಿಷ್ಕರಿಸಿದ (ನವೀಕೃತ) ಪಟ್ಟಿಯನ್ನು ಶಾಲೆಯು ನಿರ್ವಹಿಸುವುದು. | | ಎಮ್ |
| | (ii) ತಂದೆ–ತಾಯಿ / ಪೋಷಕರುಗಳಿಗೆ ಸಂದೇಶ ವ್ಯವಸ್ಥೆ ಅಥವಾ ಮೊಬೈಲ್ ಮೂಲಕ ಸಂಪರ್ಕಿಸುವುದು ಮತ್ತು ಅದೇ ರೀತಿಯಾಗಿ ತಂದೆ–ತಾಯಿಗಳಿಗೆ ನಿಯತವಾಗಿ ಮಾಹಿತಿಯನ್ನು ಕಳುಹಿಸುವುದು. | | ಆರ್ |
| 8 | ಚಾಲಕ, ಕಾವಲುಗಾರ ಮತ್ತು ಸೇವಕರುಗಳಂತಹ ಹಲವಾರು ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿಗಳು, ಗಾಲಿ ಕುರ್ಚಿಯನ್ನು ಬಳಸುವ ವಿದ್ಯಾರ್ಥಿಗಳು, ದೃಷ್ಟಿದೋಷವಿರುವ, ವಾಕ್ ಅಥವಾ ಶ್ರವಣದ ದುರ್ಬಲತೆ ಇರುವ ವಿದ್ಯಾರ್ಥಿಗಳೊಂದಿಗೆ ಸಂವಹನ ಮಾಡಲು ಮತ್ತು ನಿರ್ವಹಿಸಲು ತರಬೇತಿ ನೀಡುವುದು. | | ಎಮ್ |
| 9 | ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿಗಳು ಶೌಚಾಲಯವನ್ನು ಬಳಸುವಾಗ ಒಬ್ಬ ಉಪಚಾರಕ ಅಥವಾ ಶಿಕ್ಷಕರ ಮೂಲಕ ಮಾತ್ರ ಜೊತೆಯಾಗಿ ಹೋಗುವುದು. | | ಎಮ್ |
| 10 | (i) ದೈಹಿಕ ತರಬೇತಿ ಶಿಕ್ಷಕರು ಅವರ ದೈಹಿಕ ಸಾಮರ್ಥ್ಯ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಅನುಸಾರವಾಗಿ ಕ್ರೀಡೆಯಲ್ಲಿ ವಿದ್ಯಾರ್ಥಿಗಳನ್ನು ಸಂವೇದನಾಶೀಲರನ್ನಾಗಿಸುವುದು ಹಾಗೂ ತೊಡಗಿಸುವುದು. | | ಎಮ್ |
| | (ii) ದೈಹಿಕ ಶಿಕ್ಷಕ ಮತ್ತು ಇತರೆ ತರಬೇತಿದಾರರಿಗೆ ಶಾಲಾ ಪ್ರಾಧಿಕಾರ ಮತ್ತು ತಂದೆ–ತಾಯಿ / ಪೋಷಕರ ಅನುಮತಿಯಿಲ್ಲದೆ ಕ್ರೀಡಾ ಕೊಠಡಿಯಲ್ಲಿ ಅಥವಾ ಯಾವುದೇ ಇತರ ಪ್ರತ್ಯೇಕವಾಗಿ ಇರಿಸಿದ ಸ್ಥಳದಲ್ಲಿ, ಶಾಲಾ ಅವಧಿಯಲ್ಲಿ ಅಥವಾ ನಂತರ ಅಥವಾ ರಜಾ ದಿನಗಳಲ್ಲಿ ಯಾವುದೇ ಹುಡುಗಿ ಅಥವಾ ಹುಡುಗನಿಗೆ ಒಂಟಿಯಾಗಿ ತರಬೇತಿ ನೀಡುವುದಕ್ಕೆ ಅನುಮತಿಸುವುದಿಲ್ಲ. | | |
| 11 | ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ತಮ್ಮ ವೈಯಕ್ತಿಕ ವಿಷಯಗಳನ್ನು ವಿಶ್ವಾಸದಿಂದ ಹಂಚಿಕೊಳ್ಳುವುದಕ್ಕೆ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸುವುದು. | | ಆರ್ |

ಭಾಗ IV: ತುರ್ತು ಪರಿಸ್ಥಿತಿಯಲ್ಲಿ ಸನ್ನದ್ಧತೆ ಮತ್ತು ವಿಪತ್ತಿನ ನಿರ್ವಹಣೆ

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು/ ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 1 | ಶಾಲೆಯು ಮಕ್ಕಳು ಸುಲಭವಾಗಿ ಅರ್ಥೈಸುವ ಒಂದು ಸಾಮಾನ್ಯ ಶಬ್ದಕೋಶವನ್ನು ಅಭಿವೃದ್ಧಿಗೊಳಿಸುವುದು ಮತ್ತು ಇದನ್ನು ಕಟ್ಟುನಿಟ್ಟಾಗಿ ಅಭ್ಯಾಸ ಮಾಡಿಸಿ ತುರ್ತು ಸಂದರ್ಭದ ಸಮಯದಲ್ಲಿ ಕ್ರಮಬದ್ಧವಾಗಿ ಬಳಸುವುದು ಮತ್ತು ಸ್ಪಷ್ಟವಾದ ಸಂವಹನ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು. | | ಆರ್ |
| 2 | (i) ಸುರಕ್ಷಿತ ಸ್ಥಳಕ್ಕೆ ಯೋಜನೆಯನ್ನು ಶಾಲೆಯ ಸೌಲಭ್ಯಗಳ ಒಂದು ಪರಿಷ್ಕೃತ ನಕ್ಷೆಯನ್ನು ಶಾಲಾ ಕಟ್ಟಡದಲ್ಲಿನ ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸುವುದು. | | |
| | (ii) ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ತುರ್ತು ಸಂದರ್ಭದಲ್ಲಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವುದಕ್ಕೆ ಒಳಗಾಗಿ ಹಾಗೂ ಅಂಗವಿಕಲತೆ ಇರುವ ಮಕ್ಕಳ ಕಡೆ ವಿಶೇಷ ಗಮನಹರಿಸುವುದರೊಂದಿಗೆ, ವಿಪತ್ತಿನ ಸಂದರ್ಭದಲ್ಲಿ ಚೆಲ್ಲಾಪಿಲ್ಲಿಯಾಗಿ ಓಡುವುದನ್ನು ತಪ್ಪಿಸುವುದಕ್ಕಾಗಿ ಸುರಕ್ಷಿತ ಸ್ಥಳಗಳಿಗೆ ತೆರಳುವ ಯೋಜನೆಯ ಬಗ್ಗೆ ಅಭ್ಯಾಸ ಮಾಡಿಸುವುದು. | | ಎಮ್ |
| | (iii) ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ತುರ್ತು ಸಂದರ್ಭದಲ್ಲಿ /ವಿಪತ್ತು ಸಮಯದಲ್ಲಿ ಸೇರುವ ನಿರ್ದಿಷ್ಟ ಸ್ಥಳದ ಮೇಲೆ ನಿರ್ಣಯಿಸಲಾಗುವುದು. | | |
| 3 | ಸಿಬ್ಬಂದಿಗಳನ್ನು ಬೆಂಕಿ, ಕಟ್ಟಡ ಅಥವಾ ಗೋಡೆ ಕುಸಿತ, ಪ್ರವಾಹ, ವಿದ್ಯುತ್ ಅವಘಡ, ಉಗ್ರರ ದಾಳಿ ಮೊದಲಾದವುಗಳಂತಹ ತುರ್ತು ಸಂದರ್ಭಗಳಲ್ಲಿ ಪ್ರತಿಕ್ರಿಯಿಸುವುದಕ್ಕೆ ತರಬೇತಿ ನೀಡುವುದು. | | ಎಮ್ |
| 4 | ಅನುಕೂಲಕರವಾದ ಆ ಸ್ಥಳದಲ್ಲಿ ಅಳವಡಿಸಿದ ಮಾನದಂಡಗಳ ಪ್ರಕಾರ ಸೂಕ್ತವಾಗಿ ಕಾರ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕಗಳನ್ನು ಅನುಕೂಲಕರವಾದ ಸ್ಥಳದಲ್ಲಿ ಅಳವಡಿಸುವುದು.<br>ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಸದಸ್ಯರುಗಳಿಗೆ ಅವುಗಳನ್ನು ಹೇಗೆ ಬಳಸುವುದು ಎಂಬುದರ ಬಗ್ಗೆ ತಿಳಿಸುವುದು. | | ಎಮ್ |
| 5 | ಆಡಳಿತ, ಶಿಕ್ಷಕರು ಮತ್ತು ಹಿರಿಯ ವಿದ್ಯಾರ್ಥಿಗಳ ಸದಸ್ಯರುಗಳನ್ನೊಳಗೊಂಡಿರುವ ಶಾಲಾ ವಿಪತ್ತು ಪ್ರತಿಕ್ರಿಯೆ ತಂಡವಿರುವುದು ಮತ್ತು ಅವರು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವುದರ ಮೇಲೆ ನಿರ್ಣಯಿಸಲಾಗುವುದು. | | ಆರ್ |
| 6 | (i) ಸಿಪಿಆರ್ ಮತ್ತು ಪ್ರಥಮ ಚಿಕಿತ್ಸಾ ತರಗತಿಗಳನ್ನು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗಾಗಿ ಆಯೋಜಿಸುವುದು. | | ಎಮ್ |
| | (ii) ಪೊಲೀಸ್ 100, ಅಗ್ನಿಶಾಮಕ 101, ಆಂಬುಲೆನ್ಸ್ 108, ತುರ್ತು ಸಂದರ್ಭದಲ್ಲಿ ದೂರವಾಣಿ ಸಂಖ್ಯೆಗಳನ್ನು ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸುವುದು. | | ಎಮ್ |
| | (iii) ಶಾಲೆಯ ಸಿಬ್ಬಂದಿಗೆ ಮಾನಸಿಕ ಆಘಾತ ಮತ್ತು ವಿಪತ್ತು ಸೃಷ್ಟಿಯಾಗುವ ಬಗ್ಗೆ ಮತ್ತು ಕುಟುಂಬಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿಭಾಯಿಸುವುದಕ್ಕೆ ತರಬೇತಿ ನೀಡುವುದು. | | ಆರ್ |

ಭಾಗ V: ಸೈಬರ್ ಸುರಕ್ಷತೆ

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು / ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| 1 | ಕಂಪ್ಯೂಟರ್ ಕೊಠಡಿಗಳಿಗೆ ಪ್ರವೇಶಾವಕಾಶ ಮತ್ತು ವಿದ್ಯಾರ್ಥಿಗಳಿಂದ ವಿದ್ಯುನ್ಮಾನ ಮತ್ತು ತಾಂತ್ರಿಕ ಸಾಧನಗಳ ಬಳಕೆಯ ಬಗ್ಗೆ ಎಲ್ಲಾ ಸಮಯದಲ್ಲಿ ಶಿಕ್ಷಕರ ಅಥವಾ ಸಿಬ್ಬಂದಿಯಿಂದ ಮೇಲ್ವಿಚಾರಣೆ ಮಾಡುವುದು. | | ಎಮ್ |
| 2 | ವಿದ್ಯಾರ್ಥಿಗಳು, ಪ್ರಾಪ್ತವಯಸ್ಕರು ಇಷ್ಟಪಡುವ ಜಾಲತಾಣಗಳಿಗೆ ಪ್ರವೇಶಿಸುವುದನ್ನು ನಿರ್ಬಂಧಿಸಿ ಇಂಟರ್‌ನೆಟ್‌ನ್ನು ಭದ್ರತೆಯಲ್ಲಿರಿಸುವುದು. ಶಾಲೆಯ ಎಲ್ಲಾ ಸಮಯದಲ್ಲಿ ಸಾಮಾಜಿಕ ಜಾಲತಾಣಗಳನ್ನು ತಡೆಗಟ್ಟುವುದು. | | ಎಮ್ |
| 3 | (i) ವಿದ್ಯಾರ್ಥಿಗಳಿಗೆ ತಂತ್ರಜ್ಞಾನವನ್ನು ಸುರಕ್ಷಿತವಾಗಿ ಬಳಸುವುದು ಮತ್ತು ನಾಗರೀಕ ಪ್ರಜ್ಞೆ ಹಾಗೂ ಜವಾಬ್ದಾರಿಯಿಂದ ಮೊಬೈಲ್ ಎಸ್‌ಎಂಎಸ್, ಎಂಎಂಎಸ್, ಇಂಟರ್‌ನೆಟ್, ಇ-ಮೇಲ್ ಅಥವಾ ಇಂಟರ್‌ನೆಟ್ ಮೂಲಕ ಮಾತನಾಡುವುದು. ಅಶ್ಲೀಲ ಚಿತ್ರಗಳ ಅಪಾಯಕಾರಿ ಪರಿಣಾಮಗಳು ಮತ್ತು ಅಸುರಕ್ಷಿತ ಅಥವಾ ಅಪಾಯಕಾರಿ ನಡವಳಿಕೆಯನ್ನು ಹೇಗೆ ತಪ್ಪಿಸಿಕೊಳ್ಳಬೇಕು ಎಂಬ ಬಗ್ಗೆ ವಯಸ್ಸಿಗೆ ತಕ್ಕಹಾಗೆ ನಿಯಮಿತವಾಗಿ ಶಿಕ್ಷಣ ನೀಡುವುದು. | | ಎಮ್ |

| ಕ್ರ ಸಂ. | ಕ್ರಮಗಳು / ಸೂಚಕಗಳು | ಹೌದು / ಇಲ್ಲ | ಕಡ್ಡಾಯವಾಗಿ/ ಶಿಫಾರಸ್ಸು ಮಾಡಿದ |
|---|---|---|---|
| | (ii) ವಿದ್ಯಾರ್ಥಿಗಳಿಗೆ ಆದಾಯ ತೆರಿಗೆ ಅಧಿನಿಯಮ, ಬಾಲಕ ನ್ಯಾಯ ಅಧಿನಿಯಮ, ಭಾರತೀಯ ದಂಡ ಸಂಹಿತೆಯ ಪ್ರಕರಣಗಳು ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಅಧಿನಿಯಮ, 2012ರಿಂದ ಕಾನೂನಿನ ಅಡಿಯಲ್ಲಿ ಸೈಬರ್ ದುರ್ಬಳಕೆ, ಸೈಬರ್‌ನಿಂದ ಬೆದರಿಸುವಿಕೆ ಮತ್ತು ಕಿರುಕುಳ ಮೊದಲಾದವುಗಳ ಪರಿಣಾಮವಾಗಿ ಇತರೆ ವಿದ್ಯಾರ್ಥಿಗಳು ಅಥವಾ ವಯಸ್ಕರರಿಗೆ ವಿರುದ್ಧವಾಗಿ ವಿದ್ಯಾರ್ಥಿಗಳಿಂದ ಅಪರಾಧಗಳನ್ನು ತಡೆಗಟ್ಟುವುದರ ಬಗ್ಗೆ ದಂಡನಾತ್ಮಕ ಕ್ರಮಗಳನ್ನು ಕುರಿತು ಶಿಕ್ಷಣ ನೀಡುವುದು. | | |
| 4 | ಶಾಲಾ ಪ್ರಾಧಿಕಾರ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಸೈಬರ್ ದುರುಪಯೋಗ ಅಥವಾ ಅಪರಾಧದ ಸಂದರ್ಭದಲ್ಲಿ ಶಾಲೆಯು ಅನುಸರಿಸಬೇಕಾದ ಪ್ರಕ್ರಿಯೆಯಬಗ್ಗೆ ಪುನರ್ಮನನ ಮಾಡಿಕೊಡಬೇಕು. | | ಎಮ್ |
| 5 | ತಂದೆ-ತಾಯಿಗಳಿಗೆ ತಂತ್ರಜ್ಞಾನ, ಇಂಟರ್‌ನೆಟ್ ಸುರಕ್ಷಿತ ಬಳಕೆ, ವಿದ್ಯಾರ್ಥಿಗಳಿಂದ ಅಪಾಯಕಾರಿ ನಡವಳಿಕೆಯನ್ನು ತಡೆಗಟ್ಟುವುದಕ್ಕೆ ಕ್ರಮಗಳು ಮತ್ತು ಪರಿಹಾರಕ್ಕಾಗಿನ ಕ್ರಮಗಳ ಬಗ್ಗೆ ತಿಳಿಸುವುದು. | | ಆರ್ |
| 6 | (i) ಸೈಬರ್‌ನಿಂದ ಬೆದರಿಸುವಿಕೆ ಅಥವಾ ಕಿರುಕುಳಗಳನ್ನೊಳಗೊಂಡಂತೆ ಸೈಬರ್ ಅಪರಾಧಗಳನ್ನು ಸೂಕ್ಷ್ಮತೆ ಮತ್ತು ಗೋಪ್ಯತೆಯಿಂದ ನಿಭಾಯಿಸುವುದು.<br>(ii) ಶಾಲೆಯು ಅಂತಹ ಎಲ್ಲಾ ಅಪರಾಧಗಳ ದಾಖಲೆ ಮತ್ತು ವರದಿಯನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳತಕ್ಕದ್ದು. | | ಎಮ್ |
| 7 | ಶಿಕ್ಷಕರುಗಳು ಮತ್ತು ವಿದ್ಯಾರ್ಥಿಗಳು ಶಾಲೆಯಿಂದ ಇ-ತ್ಯಾಜ್ಯವನ್ನು ಸೂಕ್ತವಾಗಿ ನಿಭಾಯಿಸುವುದು ಮತ್ತು ಅದಕ್ಕೆ ತರಬೇತಿಗೊಳಿಸುವುದು. | | ಎಮ್ |

**ಎರಡನೇ ಅನುಸೂಚಿ**

**(5ಎ ನಿಯಮವನ್ನು ನೋಡಿ)**

**ಶಾಲಾ ಸುರಕ್ಷತೆಗಾಗಿ ಕ್ರಮಗಳು**

| | ಕ್ರಮ | ಯಾರಿಂದ | ಯಾವಾಗ/ ಮೇಲಿಂದ ಮೇಲೆ |
|---|---|---|---|
| **1. ಮಕ್ಕಳಿಗೆ ಸುರಕ್ಷಿತ ಕಲಿಕಾ ವಾತಾವರಣ ಕಲ್ಪಿಸಲು ಸಾಂಸ್ಥಿಕ ಬದ್ಧತೆಯನ್ನು ಬಲಪಡಿಸುವುದು** | | | |
| i. | ಸ್ಥಳೀಯ ಸಮುದಾಯ ಮತ್ತು ಶಾಲೆಗಳು, ಸಭೆಗಳು, ಮೆರವಣಿಗೆಗಳು ಇತ್ಯಾದಿಗಳ ಮೂಲಕ ಶಾಲಾ ಸುರಕ್ಷತೆಯ ಕಾರ್ಯಕ್ರಮದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಮತ್ತು ನಿರ್ದಿಷ್ಟಯೋಜನೆ ಮತ್ತು ಕ್ರಮವನ್ನು ಖಚಿತಪಡಿಸಿಕೊಳ್ಳಲು ಅವುಗಳನ್ನು ಸನ್ನದ್ಧುಗೊಳಿಸುವುದು. | ಎಸ್‌ಎಂಸಿ | ಪ್ರಗತಿಯಲ್ಲಿವೆ/ಅಗತ್ಯವಾದಾಗ |
| ii. | ಶಾಲೆಯಲ್ಲಿ ಆತನು / ಆಕೆ ದಿನಚರಿಯ ಜವಾಬ್ದಾರಿಯ ಭಾಗವಾಗಿ ಶಾಲಾ ಮಟ್ಟದಲ್ಲಿ ಸುರಕ್ಷತೆಗೆ ಸಂಬಂಧಿಸಿದ ಕ್ರಮಗಳನ್ನು ನಿರ್ವಹಿಸುವುದಕ್ಕೆ ಶಾಲಾ ಸುರಕ್ಷತೆಗೆ ಮುಖ್ಯೋಪಾಧ್ಯಾಯರನ್ನು (ಎಫ್‌ಪಿಟಿ) ನಿಯೋಜಿಸುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು | ತಕ್ಷಣ, ಒಂದು ಸಲ |
| iii. | ಸುರಕ್ಷತಾ ಸಂದೇಶಗಳು / ವಿವಿಧ ವಿಪತ್ತು ಸನ್ನಿವೇಶಗಳಲ್ಲಿ ಮಾಡಬೇಕಾದ ಅಥವಾ ಮಾಡಬಾರದ ಕಾರ್ಯವಿಧಾನಗಳು, ಪ್ರಕ್ರಿಯೆಗಳು ಮತ್ತು ಶಿಷ್ಟಾಚಾರಗಳು ಶಾಲೆಯಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಗೂ ತಲುಪಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಗಣ್ಯ ಶಿಕ್ಷಣ ತಜ್ಞರು / ತರಬೇತುಗಾರರ ತಂಡವನ್ನು ಗುರುತಿಸಿ ಆಯ್ಕೆ ಮಾಡುವುದು. | ಶಾಲಾ ಸುರಕ್ಷತೆಗೆ ಮುಖ್ಯೋಪಾಧ್ಯಾಯರು | ವಾರ್ಷಿಕ |
| iv. | ಶಾಲೆಯ ವಿಸ್ತರಣೆ ಮತ್ತು ಅಭಿವೃದ್ಧಿ, ಅಗ್ನಿಶಾಮಕ ಅಭ್ಯಾಸಗಳು, ವಿದ್ಯುತ್ ನಿಲುಗಡೆ, ಹವಾಮಾನ ಘಟನೆಗಳಿಗಾಗಿ ಆರಂಭದಲ್ಲಿಯೇ ಎಚ್ಚರಿಸುವಿಕೆ, ಆರೋಗ್ಯ ಮತ್ತು ಸುರಕ್ಷತಾ ಕಾಳಜಿ, ಅತಿಕ್ರಮಣಕಾರರು ಅಥವಾ ರಸ್ತೆ / ಬಸ್ ಅಪಘಾತಗಳಿಗೆ ಸಂಬಂಧಿಸಿದಂಥ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕಾರ್ಯ ವಿಧಾನಗಳನ್ನು ರೂಪಿಸುವುದು. | ಎಸ್‌ಎಂಸಿ/ಪಿಆರ್‌ಐ | ತಕ್ಷಣ, ಒಂದು ಸಲ |
| **2. ಸುರಕ್ಷತೆಗಾಗಿ ಯೋಜನೆ ರೂಪಿಸುವುದು** | | | |
| i. | ಶಾಲೆಯ ಅಭಿವೃದ್ಧಿಯ ಯೋಜನೆಯಲ್ಲಿ ಸೇರ್ಪಡೆಗಾಗಿ ಸುರಕ್ಷತಾ ದೃಷ್ಟಿಕೋನದಿಂದ ವಿವರವಾದ ಮೌಲ್ಯಮಾಪನವನ್ನು ನಡೆಸುವುದು. | ಮುಖ್ಯೋಪಾಧ್ಯಾಯರು/ ಎಸ್‌ಎಂಸಿ | ವಾರ್ಷಿಕ |
| ii. | ಅಗತ್ಯತೆಗಳ ಹಕ್ಕನ್ನು ಮೌಲ್ಯಮಾಪನ ಮಾಡುವಲ್ಲಿ ಮಕ್ಕಳು ಎಸ್‌ಎಂಸಿ, ಪಿಆರ್‌ಐಗಳು/ ಯುಎಲ್‌ಬಿಗಳು ಮತ್ತು ಇತರೆ ಯಾವುದೇ ಸಂಬಂಧಪಟ್ಟ ಮಧ್ಯಸ್ಥಗಾರರು ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು | ವಾರ್ಷಿಕ |

| | ಕ್ರಮ | ಯಾರಿಂದ | ಯಾವಾಗ/ ಮೇಲಿಂದ ಮೇಲೆ |
|---|---|---|---|
| iii. | ಶಾಲಾ ಅಭಿವೃದ್ಧಿ ಯೋಜನೆಯಲ್ಲಿ ಶಾಲಾ ಸುರಕ್ಷತೆಯ ಅಂಶಗಳನ್ನು (ರಚನಾತ್ಮಕ ಮತ್ತು ರಚನಾತ್ಮಕೇತರ) ಸೇರಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ ಎಸ್‌ಎಂಸಿ | ವಾರ್ಷಿಕ |
| iv. | ಅಪಾಯ ಮತ್ತು ಇಂದಿನವರೆಗಿನ ಯೋಜನೆ ಬಗ್ಗೆ ನಿಯಮಿತವಾಗಿ ಮೇಲ್ವಿಚಾರಣೆ ಮಾಡುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ ಎಸ್‌ಎಂಸಿ | ವಾರ್ಷಿಕ |
| v. | (ಅಪಾಯದ ಸಮಯದಲ್ಲಿ ಸುರಕ್ಷಿತ ಸ್ಥಳಕ್ಕೆ ಜನರನ್ನು ಸ್ಥಳಾಂತರಿಸುವ ಪ್ರಕ್ರಿಯೆ, ಪ್ರಯೋಗಾಲಯದಲ್ಲಿ ರಸಾಯನಿಕಗಳ ನಿರ್ವಹಣೆ, ತುರ್ತು ಸಂದರ್ಭಗಳಲ್ಲಿ ಉಪಕರಣಗಳು ಮತ್ತು ಸಾಧನಸಾಮಗ್ರಿಗಳು ಇತ್ಯಾದಿಗಳ ಸಂಗ್ರಹಣೆಯನ್ನೊಳಗೊಂಡಂತೆ) ಶಾಲೆಯ ತುರ್ತು ಪ್ರತಿಕ್ರಿಯೆಯ ಯೋಜನೆಯನ್ನು ಅಭಿವೃದ್ಧಿಪಡಿಸುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ ಎಸ್‌ಎಂಸಿ | ವಾರ್ಷಿಕ |
| | **ಕಾರ್ಯವಿಧಾನ** | **ಯಾರಿಂದ** | **ಯಾವಾಗ/ ಮೇಲಿಂದ ಮೇಲೆ** |
| **3. ಸುರಕ್ಷತಾ ಕ್ರಮಗಳ ಅನುಷ್ಠಾನ** | | | |
| i. | ಶಾಲೆಯು ಸ್ವತಃ ಕೈಗೆತ್ತಿಕೊಳ್ಳಬಹುದಾಗಿರುವ ಕಾರ್ಯ ಚಟುವಟಿಕೆಗಳನ್ನು ಎಂದರೆ, ರಚನಾತ್ಮಕೇತರ ಕ್ರಮಗಳನ್ನು ಕಡಿಮೆ ಮಾಡುವುದು ಎಂದರೆ ನಿರ್ಗಮನ ಮಾರ್ಗಗಳನ್ನು ತೆರವುಗೊಳಿಸುವುದು, ಸಡಿಲ ವಸ್ತುಗಳನ್ನು ನಿವಾರಿಸುವುದು ಮುಂತಾದ ಕಾರ್ಯಚಟುವಟಿಕೆಗಳ ಪರಿಶೀಲನೆ ಮತ್ತು ತ್ವರಿತವಾಗಿ ಕ್ರಮ ತೆಗೆದುಕೊಳ್ಳುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ ಎಸ್‌ಎಂಸಿ | ತ್ರೈಮಾಸಿಕ |
| ii. | ಶಾಲಾ ಅಭಿವೃದ್ಧಿ ಯೋಜನೆಯ ಭಾಗಗಳ ಅಂಶವನ್ನು ಪಂಚಾಯತ್ ಯೋಜನೆಗಳಲ್ಲಿ ಸೇರಿಸುವುದು ಮತ್ತು ಪಿಆರ್‌ಐಎಸ್/ ಯುಎಲ್‌ಬಿಎಸ್‌ಗಳೊಂದಿಗೆ ಸಂಬಂಧಪಟ್ಟ ಇಲಾಖೆಗಳು ಅನುಸರಿಸುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ ಎಸ್‌ಎಂಸಿ | ವಾರ್ಷಿಕ |
| iii. | ಮಕ್ಕಳಲ್ಲಿ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಲು, ಅಣುಕು ಅಭ್ಯಾಸ ಇತ್ಯಾದಿಗಳನ್ನು ಬಲಪಡಿಸುವ ಸಂಬಂಧವಾಗಿ ಅವಕಾಶಗಳನ್ನು ವೃದ್ಧಿಸುವುದಕ್ಕೆ ವೇಳಾಪಟ್ಟಿ ಮತ್ತು ಶಾಲಾ ಕ್ಯಾಲೆಂಡರ್‌ನ್ನು ತಿದ್ದುಪಡಿ ಮಾಡುವುದು | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ ಎಸ್‌ಎಂಸಿ | ತ್ರೈಮಾಸಿಕ |
| **4. ಶಾಲಾ ಸುರಕ್ಷತೆಗಾಗಿ ಸಾಮರ್ಥ್ಯವನ್ನು ಬಲಪಡಿಸುವುದು** | | | |
| i. | ಶಾಲಾ ಸುರಕ್ಷತೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ತರಬೇತಿಯ ಅಗತ್ಯತೆಗಳನ್ನು ಪರಿಗಣಿಸುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ | ವಾರ್ಷಿಕ |
| ii. | ಬೀದಿ ನಾಟಕಗಳು, ರ್‍ಯಾಲಿಗಳು, ಚಿತ್ರ ಬಿಡಿಸುವ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆಗಳು, ಘೋಷಣಾ ವಾಕ್ಯ ಬರವಣಿಗೆ ಮುಖಾಂತರ ಉದಾಹರಣೆ ಸಹಿತವಾಗಿ ಪ್ರಾದೇಶಿಕ ಹಾನಿ ಮತ್ತು ಅಪಾಯವನ್ನು ತಗ್ಗಿಸುವುದರ ಮೇಲೆ ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ | ಸಾಪ್ತಾಹಿಕ |
| iii. | ಶಾಲಾ ಸುರಕ್ಷತೆಯ ಅಡಿಯಲ್ಲಿ ನಿರಂತರ ಅಣುಕು ಅಭ್ಯಾಸಗಳನ್ನು ಮತ್ತು ಪರ್ವಗಳನ್ನು ಅನುಸರಿಸುವುದು. ಶಾಲಾ ಸುರಕ್ಷತಾ ದಿನ / ಡಿಆರ್‌ಆರ್ ದಿನ ವಾರ್ಷಿಕವಾಗಿ ಗೊತ್ತುಪಡಿಸಿದವುಗಳನ್ನು ಒಳಗೊಂಡಂತೆ ಸುರಕ್ಷತಾ ಸಲಕರಣೆಗಳ ಬಳಕೆ ಇತ್ಯಾದಿಗಳ ಮೇಲೆ ಪ್ರಾಯೋಗಿಕ ಪ್ರದರ್ಶನವನ್ನು ಏರ್ಪಡಿಸುವುದು. | ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ | ಮಾಸಿಕ |
| iv. | ಸುರಕ್ಷತಾ ಅಗತ್ಯತೆಗಳ ನಿರ್ಧಾರಣೆ ಮೇಲೆ ಎಸ್‌ಎಂಸಿ ತರಬೇತಿ, ಅಭಿವೃದ್ಧಿ ಯೋಜನೆಗಳು ಹಾಗೂ ಸುರಕ್ಷಿತವಾಗಿ ಲೆಕ್ಕಪರಿಶೋಧನೆ ಮಾಡುವುದು. | ಮುಖ್ಯೋಪಾಧ್ಯಾಯರು | ತ್ರೈಮಾಸಿಕ |
| V. ವಿಪತ್ತುಗಳು, ಅಣುಕು ಅಭ್ಯಾಸ (ಪ್ರದರ್ಶನ) ಮುಂತಾದವುಗಳ ಮೂಲಕ ಮಾಡಬೇಕಾದ ಮತ್ತು ಮಾಡಬಾರದ ಕಾರ್ಯವಿಧಾನಗಳ ಬಗ್ಗೆ ನುರಿತ ಶಿಕ್ಷಕರಿಂದ ತರಬೇತಿಯನ್ನು ನೀಡುವುದು | | | |
| **5. ಶಾಲಾ ಸುರಕ್ಷತೆಯ ಮೇಲ್ವಿಚಾರಣೆ** | | | |
| i. | (ಗ್ರಾಮೀಣ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಮತ್ತು ಅಗ್ನಿಶಾಮಕ ಪ್ರಾಧಿಕಾರಗಳಿಂದ ಸ್ಪಷ್ಟೀಕರಣ) ಅಗ್ನಿಶಾಮಕ ಸುರಕ್ಷತೆ ಮತ್ತು ಆಹಾರ ಸುರಕ್ಷತೆಯನ್ನೊಳಗೊಂಡಂತೆ ಶಾಲೆಯಲ್ಲಿ ಸುರಕ್ಷಿತವಾದ ಲೆಕ್ಕಪರಿಶೋಧನೆ ನಡೆಸುವುದು. | ಎಸ್‌ಎಂಸಿ | ತ್ರೈಮಾಸಿಕ |

| | ಕ್ರಮ | ಯಾರಿಂದ | ಯಾವಾಗ/ ಮೇಲಿಂದ ಮೇಲೆ |
|---|---|---|---|
| ii. | ಗಮನಕ್ಕೆ ಬಾರದೆ ಉದ್ಭವಿಸುವಂತಹ ಅಪಾಯಗಳಿಂದ ಪಾಠಗಳು ಮತ್ತು ಕಣ್ಣಿಗೆ ಬೀಳುವಂತಹ ಹೆಚ್ಚುವರಿ ಹೊಸ ಅಪಾಯಗಳನ್ನು ಗುರುತಿಸುವುದಕ್ಕೆ ಶಾಲಾ ಅಭಿವೃದ್ಧಿ ಯೋಜನೆಗಳ ಬಗ್ಗೆ ಪುನರ್ ಪರಿಶೀಲನೆ ಮಾಡುವುದು. | ಎಸ್‌ಎಂಸಿ | ತ್ರೈಮಾಸಿಕ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ನಾಗೇಶ್ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಾಥಮಿಕ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವಾಲಯ

### ಅಧಿಸೂಚನೆ – II

### ಸಂಖ್ಯೆ : ಇಡಿ 709 ಪಿಜಿಸಿ 2017, ಬೆಂಗಳೂರು, ದಿನಾಂಕ: 07-03-2018

ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 145ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997ರ 5ಎ, 30, 31, 32 ಮತ್ತು 36ನೇ ಪ್ರಕರಣಗಳೊಂದಿಗೆ ಓದಲಾದ, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ ಮತ್ತು ನೋಂದಣಿ) (ತಿದ್ದುಪಡಿ) ನಿಯಮಗಳು, 2017ರ ಕರಡನ್ನು ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ದಿನಾಂಕ: 03.01.2018ರ ಭಾಗ IVಎ ರಲ್ಲಿ ಸಂಖ್ಯೆ 12ರಲ್ಲಿ, ಅಧಿಸೂಚನೆ-II ಸಂಖ್ಯೆ ಇಡಿ 709 ಪಿಜಿಸಿ 2017, ದಿನಾಂಕ:02.01.2018ರಲ್ಲಿ ಸರ್ಕಾರಿ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ.

ಅಧಿಸೂಚನೆ ಸಂಖ್ಯೆ ಇಡಿ 709 ಪಿಜಿಸಿ 2017, ದಿನಾಂಕ: 03-02-2018ರಲ್ಲಿ, ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV ಎ ಸಂಖ್ಯೆ. 243 ದಿನಾಂಕ:03-02-2018ರಂದು ಮತ್ತೊಮ್ಮೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಸಲಹೆಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವುದಕ್ಕೆ ಮತ್ತೆ ಹದಿನೈದು ದಿನಗಳ ಹೆಚ್ಚಿನ ಸಮಯಾವಕಾಶವನ್ನು ವಿಸ್ತರಿಸಲಾಗಿರುವುದರಿಂದ.

ಮತ್ತು ಸದರಿ ರಾಜ್ಯಪತ್ರವನ್ನು ದಿನಾಂಕ:03-01-2018 ಮತ್ತು 03-02-2018ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.ಮತ್ತು ಸಾರ್ವಜನಿಕರಿಂದ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿರುವುದರಿಂದ.

ಆದ್ದರಿಂದ, ಈಗ, ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ1) ರ 5ಎ, 30, 31, 32, ಮತ್ತು 36ನೇ ಪ್ರಕರಣಗಳೊಂದಿಗೆ ಓದಲಾದ 145ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

### ನಿಯಮಗಳು

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ ಮತ್ತು ನೋಂದಣಿ) (ತಿದ್ದುಪಡಿ) ನಿಯಮಗಳು, 2018 ಎಂದು ಕರೆಯತಕ್ಕದ್ದು.

(2) ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997ರ (ಇದರಲ್ಲಿ ಇನ್ನುಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), 3ನೇ ನಿಯಮದಲ್ಲಿ ,

(i) (1)ನೇ ಉಪನಿಯಮಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಶೈಕ್ಷಣಿಕ ಸಂಸ್ಥೆಯನ್ನು ನೋಂದಾಯಿಸಿಕೊಳ್ಳುವುದಕ್ಕಾಗಿ ಅರ್ಜಿಯನ್ನು ಸಂಸ್ಥೆಯು ಹೆಚ್ಚುವರಿ ವಿವರಣೆಗಳೊಂದಿಗೆ ಮತ್ತು ಸೂಕ್ತ ರೀತಿಯಲ್ಲಿ, ವಿಷಯಗಳು ಮತ್ತು ಸಮರ್ಪಕ ದಾಖಲೆಗಳೊಂದಿಗೆ ನಮೂನೆ-Iರಲ್ಲಿ ಪ್ರಾರಂಭಿಸುವುದಕ್ಕೆ ಶೈಕ್ಷಣಿಕ ವರ್ಷದ ಮೊದಲಿನ ವರ್ಷದ ನವೆಂಬರ್ 30 ರಂದು ಅಥವಾ ಅದಕ್ಕಿಂತ ಮೊದಲು ಇಲಾಖೆಯ ಐಟಿ ಪೋರ್ಟಲ್‌ದಿಂದ ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು, ಅಂಥ ಅರ್ಜಿಗಾಗಿ ನೋಂದಾಯಿಸುವ ಪ್ರಾಧಿಕಾರವು ಆ ಸಂಸ್ಥೆಯಲ್ಲಿ ಉನ್ನತ ಮಟ್ಟದ ಶಿಕ್ಷಣವನ್ನು ನೀಡುವುದಕ್ಕಾಗಿ ಕೋರಿರುವ ಸರ್ಕಾರದ ಅಧಿಸೂಚಿತ ಪ್ರಾಧಿಕಾರವಾಗಿರತಕ್ಕದ್ದು:

ಪರಂತು, ಸರ್ಕಾರವು ಸಮಂಜಸ ಕಾರಣಗಳಿಂದ ಅಂಥ ಅರ್ಜಿಯನ್ನು ಸಲ್ಲಿಸುವುದಕ್ಕಾಗಿ ತರುವಾಯದ ದಿನಾಂಕವನ್ನು ಪುರಸ್ಕರಿಸಬಹುದು.ಆದರೆ ಅರವತ್ತು ದಿನಗಳು ಮೀರಬಾರದು."

(ii) (2)ನೇ ಉಪ-ನಿಯಮದಲ್ಲಿ,

(ಎ) "ನೋಂದಣಿ ಶುಲ್ಕ" ಎಂಬ ಪದಗಳ ಬದಲಾಗಿ "ನೋಂದಣಿ ಶುಲ್ಕ ಮತ್ತು ಸಂಸ್ಕರಣ ಶುಲ್ಕ" ಎಂಬ ಪದಗಳು ನವೆಂಬರ್ 2014ರ 11ನೇ ದಿನದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

ಮೇಲ್ದರ್ಜೆಗೇರಿಸುವುದಕ್ಕಾಗಿ ಅನ್ವಯಿಸತಕ್ಕದ್ದಲ್ಲ. ಪರಂತು, ಸಂಸ್ಥೆಯನ್ನು ಮೇಲ್ದರ್ಜೆಗೇರಿಸುವುದಕ್ಕಾಗಿ ಅವುಗಳನ್ನು ಒಳಗೊಂಡಿರುವ ಇತರೆ ಮೂಲಭೂತ ಸೌಕರ್ಯಗಳ ಅಗತ್ಯತೆಗಳನ್ನು ಭರಿಸುವುದು". ಎಂಬ ಪದಗಳು, ಆವರಣಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು.

**5. 6–ಎ ಹೊಸ ನಿಯಮದ ಸೇರ್ಪಡೆ:**–ಸದರಿ ನಿಯಮಗಳ 6ನೇ ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**6–ಎ. ನೋಂದಣಿ ಪ್ರಮಾಣಪತ್ರಗಳನ್ನು ನೀಡುವುದು.**

ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಮತ್ತು ಹಿರಿಯ ಪ್ರೌಢ ಶಿಕ್ಷಣ ನೀಡುವುದಕ್ಕಾಗಿ ಅಥವಾ ಅದೇ ಭೌಗೋಳಿಕ ಸ್ಥಳದಲ್ಲಿ ಅದರ ಯಾವುದೇ ಭಾಗದಲ್ಲಿ ವಿವಿಧ ನೋಂದಣಿ ಪ್ರಮಾಣಪತ್ರಗಳ ಮೇರೆಗೆ ಶೈಕ್ಷಣಿಕ ಸಂಸ್ಥೆಯನ್ನು ನಡೆಸುತ್ತಿರುವ ಪ್ರತಿಯೊಂದು ಆಡಳಿತ ಮಂಡಳಿ ಈ ಪ್ರಮಾಣ ಪತ್ರಗಳನ್ನು ನೀಡುವುದಕ್ಕಾಗಿ ಮತ್ತು ಸಂಸ್ಥೆಗೆ ಒಂದೇ ಯುಡಿಐಎಸ್‌ಇ (UDISE) ಕೋಡ್ ಕೊಡುವುದಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಈ ಉದ್ದೇಶಕ್ಕಾಗಿ ಯಾವುದೇ ಶುಲ್ಕವಿರತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎ. ನಾಗೇಶ್ ರಾವ್**

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಾಥಮಿಕ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

## ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವಾಲಯ

### ಅಧಿಸೂಚನೆ – III

**ಸಂಖ್ಯೆ : ಇಡಿ 709 ಪಿಜಿಸಿ 2017, ಬೆಂಗಳೂರು, ದಿನಾಂಕ: 07–03–2018**

ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ) ರ 145ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆ) ನಿಯಮಗಳು, 1999ರ 5ಎ, 30, 31, 32, ಮತ್ತು 36ನೇ ಪ್ರಕರಣಗಳೊಂದಿಗೆ ಓದಲಾದ, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾನ್ಯತೆ) (ತಿದ್ದುಪಡಿ) ನಿಯಮಗಳು, 2017ರ ಕರಡನ್ನು, ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ದಿನಾಂಕ: 03–01–2018ರ ಭಾಗ IV–ಎ ಸಂಖ್ಯೆ 13ರಲ್ಲಿ ಅಧಿಸೂಚನೆ–III ಸಂಖ್ಯೆ ಇಡಿ 709 ಪಿಜಿಸಿ 2017, ದಿನಾಂಕ:02–01–2018ರಲ್ಲಿ ಅಧಿಕೃತ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ. ಮತ್ತು ಅಧಿಸೂಚನೆ ಸಂಖ್ಯೆ ಇಡಿ 709 ಪಿಜಿಸಿ 2017, ದಿನಾಂಕ: 03–02–2018ರಲ್ಲಿ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV ಎ ಸಂಖ್ಯೆ 243 ದಿನಾಂಕ: 03–02–2018ರಂದು ಮತ್ತೊಮ್ಮೆ ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಸಲಹೆಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವುದಕ್ಕೆ ಹದಿನೈದು ದಿನಗಳ ಸಮಯಾವಕಾಶವನ್ನು ಮತ್ತಷ್ಟು ವಿಸ್ತರಿಸಲಾಗಿರುವುದರಿಂದ.ಮತ್ತು ಸದರಿ ರಾಜ್ಯಪತ್ರವನ್ನು ದಿನಾಂಕ: 03–01–2018 ಮತ್ತು 03–02–2018ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.ಮತ್ತು ಸಾರ್ವಜನಿಕರಿಂದ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸುವುದರಿಂದ.

ಆದ್ದರಿಂದ, ಈಗ, ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ1)ರ 5ಎ, 30, 31, 32, ಮತ್ತು 36ನೇ ಪ್ರಕರಣಗಳೊಂದಿಗೆ ಓದಲಾದ 145ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

### ನಿಯಮಗಳು

1. **ಹೆಸರು ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾನ್ಯತೆ) (ತಿದ್ದುಪಡಿ) ನಿಯಮಗಳು, 2018 ಎಂದು ಕರೆಯತಕ್ಕದ್ದು.

(2) ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 1ನೇ ನಿಯಮದ ಪ್ರತಿಯೋಜನೆ.**– ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾನ್ಯತೆ) ನಿಯಮಗಳು, 1999ರಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) 1ನೇ ನಿಯಮದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**1. ಹೆಸರು, ಅರ್ಜಿ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ನೋಂದಣಿ) ನಿಯಮಗಳು, 1999 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಮತ್ತು ಹಿರಿಯ ಪ್ರೌಢ ಶಿಕ್ಷಣ ನೀಡುವ ಅಥವಾ ಅದರ ಯಾವುದೇ ಭಾಗದಲ್ಲಿನ ಶೈಕ್ಷಣಿಕ ಸಂಸ್ಥೆಗಳ ಮಾನ್ಯತೆಗೆ ಅನ್ವಯಿಸತಕ್ಕದ್ದು.

(3) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು".

**3. 2ನೇ ನಿಯಮದ ತಿದ್ದುಪಡಿ.**– ಸದರಿ ನಿಯಮಗಳ 2ನೇ ನಿಯಮದಲ್ಲಿ (1)ನೇ ಉಪ–ನಿಯಮದಲ್ಲಿ (ಸಿ)ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

(ಸಿ) "ನೋಂದಾಯಿತ ಸಂಸ್ಥೆ" ಎಂದರೆ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಮತ್ತು ಹಿರಿಯ ಪ್ರೌಢ ಶಿಕ್ಷಣ ಮತ್ತು ಅದರ ಯಾವುದೇ ಭಾಗದಲ್ಲಿ ಶಿಕ್ಷಣ ನೀಡಲು ಅಧಿನಿಯಮದ ಅಡಿಯಲ್ಲಿ ನೋಂದಾಯಿಸಿರುವ ಶೈಕ್ಷಣಿಕ ಸಂಸ್ಥೆ".

**4.3ನೇ ನಿಯಮದ ತಿದ್ದುಪಡಿ.**– (1) ಸದರಿ ನಿಯಮಗಳ 3ನೇ ನಿಯಮದಲ್ಲಿ,

(i) 1ನೇ ಉಪ–ನಿಯಮದಲ್ಲಿ, "ಅರ್ಜಿಯನ್ನು ತ್ರಿಪ್ರತಿಯಲ್ಲಿ ಮತ್ತು ನಮೂನೆ 1ರಲ್ಲಿ ಸಲ್ಲಿಸತಕ್ಕದ್ದು". ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ "ಅರ್ಜಿಯನ್ನು ಹೆಚ್ಚುವರಿ ವಿವರಣೆಗಳೊಂದಿಗೆ ಮತ್ತು ಅಗತ್ಯ ವಿಷಯ ಮತ್ತು ದಾಖಲೆಗಳೊಂದಿಗೆ ನಮೂನೆ–1 ರಲ್ಲಿ ಇಲಾಖೆಯ ಐಟಿ ಪೋರ್ಟಲ್‌ದಿಂದ ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು" ಎಂಬ ಪದಗಳು, ಅಕ್ಷರಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(ii) 1ನೇ ಉಪನಿಯಮದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, 36ನೇ ಪ್ರಕರಣದ 6ನೇ ಉಪ–ಪ್ರಕರಣದ (ಬಿ) ಖಂಡದ ಅಡಿಯಲ್ಲಿ ನೀಡಲಾದ ತಾತ್ಕಾಲಿಕ ಅನುಮೋದನೆಯೊಂದಿಗೆ ನೋಂದಾಯಿತವಾದ ಸಂಸ್ಥೆಯು ತಾತ್ಕಾಲಿಕ ಅನುಮೋದನೆಯ ಅವಧಿ ಮುಕ್ತಾಯಗೊಳ್ಳುವುದಕ್ಕಿಂತ ಮುಂಚೆ ಕನಿಷ್ಠ ಪಕ್ಷ ಮೂರು ತಿಂಗಳುಗಳೊಳಗೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(iii) 2ನೇ ಉಪನಿಯಮದಲ್ಲಿ ಈ ಕೋಷ್ಟಕದ ಬದಲಾಗಿ ಈ ಮುಂದಿನ ಕೋಷ್ಟಕಗಳನ್ನು 11–11–2014 ರಿಂದ ಜಾರಿಗೆ ಬರುವಂತೆ ಮತ್ತು 05–09–2015ರವರೆಗೆ ಜಾರಿಯಲ್ಲಿರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು, ಎಂದರೆ:–

**"ಕೋಷ್ಟಕ"**

| ಕ್ರ ಸಂ. | ಶೈಕ್ಷಣಿಕ ಸಂಸ್ಥೆಗಳ ತರಗತಿಗಳು (ಶಿಕ್ಷಣ ನೀಡುವವರೆಗೆ) | ಭದ್ರತಾ ಠೇವಣಿಯ ಮೌಲ್ಯ |
|---|---|---|
| 1 | ಕಿರಿಯ ಪ್ರಾಥಮಿಕ ಶಾಲೆ | 1 ಲಕ್ಷ ರೂ |
| 2 | ಹಿರಿಯ ಪ್ರಾಥಮಿಕ ಶಾಲೆ (ಕನ್ನಡ ಮಾಧ್ಯಮ) | 2 ಲಕ್ಷ ರೂ |
| 3 | ಹಿರಿಯ ಪ್ರಾಥಮಿಕ ಶಾಲೆ (ಇಂಗ್ಲೀಷ್ ಮಾಧ್ಯಮ) | 5 ಲಕ್ಷ ರೂ |
| 4 | ಪ್ರೌಢಶಾಲೆ (ಕನ್ನಡ ಮಾಧ್ಯಮ) | 3 ಲಕ್ಷ ರೂ |
| 5 | ಪ್ರೌಢಶಾಲೆ (ಇಂಗ್ಲೀಷ್ ಮಾಧ್ಯಮ) | 10 ಲಕ್ಷ ರೂ |

**(iv) ಹಾಗೆ ಪ್ರತಿಯೋಜಿಸಲಾದ ಕೋಷ್ಟಕಕ್ಕಾಗಿ, ಈ ಮುಂದಿನ ಕೋಷ್ಟಕವನ್ನು 05–09–2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು, ಎಂದರೆ:–**

**"ಕೋಷ್ಟಕ"**

| ಕ್ರ ಸಂ. | ಶೈಕ್ಷಣಿಕ ಸಂಸ್ಥೆಗಳ ತರಗತಿಗಳು (ಯಾವುದೇ ಮಾಧ್ಯಮ) (ಶಿಕ್ಷಣ ನೀಡುವವರೆಗೆ) | ಭದ್ರತಾ ಠೇವಣಿಯ ಮೌಲ್ಯ |
|---|---|---|
| 1 | ಕಿರಿಯ ಪ್ರಾಥಮಿಕ ಶಾಲೆ | 1 ಲಕ್ಷ ರೂ |
| 2 | ಹಿರಿಯ ಪ್ರಾಥಮಿಕ ಶಾಲೆ | 2 ಲಕ್ಷ ರೂ |
| 3 | ಪ್ರೌಢಶಾಲೆ | 3 ಲಕ್ಷ ರೂ |

(v) (iv)ನೇ ಖಂಡದ ಮೂಲಕ ಹಾಗೆ ಪ್ರತಿಯೋಜಿಸಲಾದ ಕೋಷ್ಟಕದ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

**"ಕೋಷ್ಟಕ"**

| ಕ್ರ ಸಂ. | ಶೈಕ್ಷಣಿಕ ಸಂಸ್ಥೆಗಳ ತರಗತಿಗಳು (ಯಾವುದೇ ಮಾಧ್ಯಮ) (ಶಿಕ್ಷಣ ನೀಡುವವರೆಗೆ) | ಭದ್ರತಾ ಠೇವಣಿಯ ಮೌಲ್ಯ |
|---|---|---|
| 1 | ಪೂರ್ವ ಪ್ರಾಥಮಿಕ ಶಿಕ್ಷಣ ಮಾತ್ರ | ಇಲ್ಲ |
| 2 | ಪ್ರಾಥಮಿಕ ಶಿಕ್ಷಣ | 2 ಲಕ್ಷ ರೂ |
| 3 | ಪ್ರೌಢ ಶಿಕ್ಷಣ (ಸೆಕೆಂಡರಿ ಎಜ್ಯುಕೇಶನ್) | 3 ಲಕ್ಷ ರೂ |
| 4 | ಹಿರಿಯ ಪ್ರೌಢ ಶಿಕ್ಷಣ (ಹೈಯರ್ ಸೆಕೆಂಡರಿ ಎಜ್ಯುಕೇಶನ್) | 5 ಲಕ್ಷ ರೂ |

ಪರಂತು, ಅಗತ್ಯಪಡಿಸಲಾದ ಮೇಲಿನ ಭದ್ರತಾ ಠೇವಣಿಯು ಹೆಚ್ಚುವರಿ ಶಿಕ್ಷಣ ಗುಣಮಟ್ಟವನ್ನು ಸೇರಿಸುವುದನ್ನು ಒಳಗೊಂಡಂತೆ ಮೇಲ್ದರ್ಜೆಗೇರಿಸುವ ಪ್ರಕರಣಗಳಿಗಾಗಿ ಅನ್ವಯಿಸತಕ್ಕದ್ದು :

ಮತ್ತು ಪರಂತು, ಅಗತ್ಯಪಡಿಸಲಾದ ಮೇಲಿನ ಭದ್ರತಾ ಠೇವಣಿಯು, ಮೇಲ್ದರ್ಜೆಗೇರಿಸುವ ಇತರ ಪ್ರಕರಣಗಳಿಗಾಗಿ ಮತ್ತು ಇರುವ ಸಂಸ್ಥೆಗಳ ಮಾನ್ಯತೆಯ ನವೀಕರಣಕ್ಕಾಗಿ ಅನ್ವಯಿಸತಕ್ಕದ್ದಲ್ಲ.

(2) (3)ನೇ ಉಪ-ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4) ಮಾನ್ಯತೆ ನವೀಕರಣಕ್ಕಾಗಿ ಅವುಗಳನ್ನು ಒಳಗೊಂಡಂತೆ ಮಾನ್ಯತೆಗಾಗಿ ಪ್ರತಿಯೊಂದು ಅರ್ಜಿಯು ಕೆಳಗೆ ವಿವರಿಸಿರುವ ಸಂಸ್ಕರಣ ಶುಲ್ಕವನ್ನು ಅಗತ್ಯಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರದ ಸಂಚಿತನಿಧಿಗೆ ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು.

| ಕ್ರ ಸಂ. | ಶೈಕ್ಷಣಿಕ ಸಂಸ್ಥೆಗಳ ತರಗತಿಗಳು (ಶಿಕ್ಷಣ ನೀಡುವವರೆಗೆ) | ಮಾನ್ಯತೆ ಮತ್ತು ಸಂಸ್ಕರಣ ಶುಲ್ಕ |
|---|---|---|
| 1 | ಪೂರ್ವ ಪ್ರಾಥಮಿಕ ಶಿಕ್ಷಣ ಮಾತ್ರ | 2000. ರೂ |
| 2 | ಪ್ರಾಥಮಿಕ ಶಿಕ್ಷಣ | 5000.ರೂ |
| 3 | ಪ್ರೌಢ ಶಿಕ್ಷಣ (ಸೆಕೆಂಡರಿ ಎಜ್ಯುಕೇಷನ್) | 10000.ರೂ |
| 4 | ಹಿರಿಯ ಪ್ರೌಢ ಶಿಕ್ಷಣ (ಹೈಯರ್ ಸೆಕೆಂಡರಿ ಎಜ್ಯುಕೇಶನ್) | 20000.ರೂ. |

ಅವು ಮೇಲಿನ ವಿವರವಾದ ಸಂಸ್ಕರಣ ಶುಲ್ಕವನ್ನು ಹೊರತುಪಡಿಸಿ ಯಾವುದೇ ಮಾನ್ಯತೆಯ ಶುಲ್ಕವಾಗಿರತಕ್ಕದ್ದಲ್ಲ.

5. 4ನೇ ನಿಯಮದ ತಿದ್ದುಪಡಿ.- ಸದರಿ ನಿಯಮಗಳ ನಿಯಮ-4 ರಲ್ಲಿ,-

(i) 1ನೇ ಉಪನಿಯಮದ (ಕೆ) ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಕೆ) ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆಗಾಗಿ ಈ ಅಧಿನಿಯಮದ 5ಎ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಕ್ರಮಗಳನ್ನು ಪಾಲಿಸುವುದು".

(ii) (2)ನೇ ಉಪ-ನಿಯಮದಲ್ಲಿ (ಜಿ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಹೆಚ್) ಸಂಸ್ಥೆಯು, ಇಲಾಖೆಯ ಐಟಿ ಪೋರ್ಟಲ್ (sts.karnataka.gov.in) ದಿಂದ ಸಂಸ್ಥೆ ಮತ್ತು ಅದರ ಬೋಧನಾ ಸಂಪನ್ಮೂಲಗಳ ವಿವರಗಳನ್ನು ಒದಗಿಸತಕ್ಕದ್ದು".

(iii) (3)ನೇ ಉಪ ನಿಯಮದಲ್ಲಿ "ನಮೂನೆ II ರಲ್ಲಿರತಕ್ಕದ್ದು" ಎಂಬ ಪದಗಳ ತರುವಾಯ "ಕನಿಷ್ಠ ಹತ್ತು ವರ್ಷಗಳ ಅವಧಿಯಾಗಿರತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

PR - 15
SC - 1000

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರಮತ್ತು ಅವರ ಹೆಸರಿನಲ್ಲಿ,

**ವಿ.ನಾಗೇಶ್ ರಾವ್**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಾಥಮಿಕ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

## WOMEN AND CHILD DEVELOPMENT AND EMPOWERMENT OF DIFFERENTLY ABLED AND SENIOR CITIZENS SECRETARIAT

### NOTIFICATION

**No.WCD 258 SJD 2016(P-1), Bengaluru. Dated: 05.02.2019**

Whereas the draft of the Karnataka Department of Women and Child Development (Cadre & Recruitment (Amendment) Rules 2018 was published as required by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) in Notification No. WCD 258 SJD 2016(PI) Bengaluru dated 29.12.2018 and in part 4A of the Karnataka Gazette dated 03.01.2019, inviting objections and suggestions from all persons likely to be affected thereby within fifteen days from the date of publication of the draft in the Official Gazette.

Whereas the said Gazette was made available to the public on 03.01.2019.

And Wheras the suggestions and objections are not received.

Now therefore, in exercise of the powers conferred by sub section (1) of section 3 read with section 8 of the Karnataka State Civil Services Act, 1978 (Karnataka Act 14 of 1990) the Government of Karnataka hereby makes the following rules, namely :-